ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 30 ಜುಲೈ 27, 1986 ಬೆಲೆ 80 ಪೈಸೆ.

ಆಗಸ್ಟ್ 1 ರಂದು ರಾಜ್ಯಾದ್ಯಂತ ರೈತರ ಧರಣಿ

ಕರ್ನಾಟಕದ ಸಮಸ್ತ ರೈತರಿಗೆ ಸಂಬಂಧಿಸಿದ ಹತ್ತು ಪ್ರಮುಖ ಬೇಡಿಕೆಗಳ ಬಗ್ಗೆ ಸರಕಾರಕ್ಕೆ ಒತ್ತಾಯಿಸಲು, ಈಗಾಗಲೇ ಮುಖ್ಯಮಂತ್ರಿಯವರಿಗೆ ಸಲ್ಲಿಸಿದ್ದ ಈ ಬೇಡಿಕೆಗಳನ್ನು ಪೂರೈಸಬೇಕೆಂದು ವಿನಂತಿಸಿದ್ದ ಮನವಿಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಲು ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಕಛೇರಿಗಳ ಮುಂದೆ ಆಗಸ್ಟ್ 1 ರಂದು ಧರಣಿ ಸತ್ಯಾಗ್ರಹ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ ಕರೆ ನೀಡಿದೆ. ಈ ಕರೆಗೆ ಓಗೊಟ್ಟು ಕರ್ನಾಟಕ ಪ್ರಾಂತ ರೈತ ಸಂಘದ ಎಲ್ಲಾ ಜಿಲ್ಲಾ ಘಟಕಗಳು ಭರದಿಂದ ಸಿದ್ಧತೆ ನಡೆಸಿವೆ. ಈ ಚಳುವಳಿಯನ್ನು ಯಶಸ್ವಿ ಮಾಡಬೇಕೆಂದು ಪ್ರಾಂತ ರೈತ ಸಂಘ ಸಮಸ್ತ ರೈತ ಕೃಷಿ ಕಾರ್ಮಿಕರನ್ನು ವಿನಂತಿಸುತ್ತದೆ.

ಆಗಸ್ಟ್ 6 ರಂದು

ಹಿರೋಷಿಮಾ ದಿನ ಯಶಸ್ವಿಗೊಳಿಸಿರಿ

1945 ಆಗಸ್ಟ್ 6 ರಂದು ಜಪಾನ್ ದೇಶದಲ್ಲಿರುವ ಹಿರೋಷಿಮ ನಗರದ ಮೇಲೆ ಅಮೇರಿಕ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯ ಶಾಹಿಗಳು ಪ್ರಪಂಚದ ಇತಿಹಾಸದಲ್ಲಿಯೇ ಮೊದಲ ಅಣು ಬಾಂಬನ್ನು ಹಾಕಿ ಎರಡು ಲಕ್ಷ ಜನರನ್ನು ಒಂದೇ ದಿವಸವಲ್ಲಿ ಕೊಂದರು. ಅವರಲ್ಲಿ 1,40,000 ಜನರು ಕ್ಷಣಾರ್ಧದಲ್ಲಿಯೇ ಭಸ್ಮವಾದರು. ಸಾಯದೇ ಉಳಿದ ಲಕ್ಷಾಂತರ ಜನರು ಅಣು ಬಾಂಬಿನ ಸಿಡಿತದ ಪರಿಣಾಮದಿಂದ ವಿಕಿರಣ ಪ್ರಸಾರದ ಪರಿಣಾಮದಿಂದ ಚಿತ್ರ ಹಿಂಸೆಯನ್ನು ಅನುಭವಿಸಿದರು, ಶಾಶ್ವತವಾಗಿ ಅಂಗ ವಿಕಲರಾದರು. ಮೂರು ದಿವಸಗಳ ನಂತರ ಆಗಸ್ಟ್ 9 ರಂದು ಸಾಮ್ರಾಜ್ಯ ಶಾಹಿಗಳು ಜಪಾನಿನ ನಾಗಸಾಕಿ ನಗರದ ಮೇಲೆ ಅಣು ಬಾಂಬ್ ಹಾಕಿ ಮತ್ತೆ ಲಕ್ಷಾಂತರ ಜನರನ್ನು ಸಾಯಿಸಿದರು.

ರೋನಲ್ಡ್ ರೇಗನ್ ನೇತೃತ್ವದಲ್ಲಿ ಇಂದು ಸಾಮ್ರಾಜ್ಯ ಶಾಹಿಗಳು ತಾರಾ ಯುದ್ಧದ ಯೋಜನೆಯನ್ನು ಭರದಿಂದ ಮುಂದುವರಿಸುತ್ತಿದ್ದು, ಸಮಾಜವಾದಿ ದೇಶಗಳ ಮೇಲೆ ಅದರಲ್ಲಿಯೂ ಪ್ರಪಂಚದ ಮೊದಲ ಸಮಾಜವಾದಿ ದೇಶದ ಮೇಲೆ ಅಣ್ವಸ್ತ್ರಗಳ ದಾಳಿಗಳನ್ನು ನಡೆಸಲು ಸಜ್ಜಾಗುತ್ತಿದ್ದು, ತಮ್ಮಮೂಲಕ ಇಡೀ ಪ್ರಪಂಚವನ್ನು ಸಾಮ್ರಾಜ್ಯ ಶಾಹಿಗಳ ತುಳಿತ, ಸುಲಿಗೆ, ಕೊಳ್ಳೆ, ದಬ್ಬಾಳಿಕೆಗೊಳಪಡಿಸಲು ಹಾತೊರೆಯುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಡಬ್ಲಿನ ನಗರದಲ್ಲಿ ನಡೆದ ಜಾಗತಿಕ ಕಾರ್ಮಿಕ ಸಂಘಗಳ ಸಮ್ಮೇಳನವು ಮೊದಲ ಅಣು ಬಾಂಬ್ ಪ್ರಯೋಗದ 21 ನೇಯ ವಾರ್ಷಿಕೋತ್ಸವದ ದಿನವಾದ 1986 ಆಗಸ್ಟ್ 6 ರಂದು ಹಿರೋಷಿಮ ದಿನವನ್ನು ಆಚರಿಸಿ ಅಣು ಯುದ್ಧ ವಿರೋಧಿ ಚಳುವಳಿಯನ್ನು ಮುಂದುವರಿಸಲು ಕರೆ ಕೊಟ್ಟಿದೆ. ಸಿ ಐ ಟಿ ಯು ಸಂಘಗಳ ಎಲ್ಲಾ ಸದಸ್ಯರಿಗೆ, ಎಲ್ಲಾ ಕಾರ್ಮಿಕರಿಗೆ ಹಿರೋಷಿಮ ದಿನಾಚರಣೆಯ ಮಹತ್ವವನ್ನು ವಿವರಿಸಿ ಎಲ್ಲಾ ಕಾರ್ಮಿಕರೂ 6-8-1986 ರಂದು ಹಿರೋಷಿಮ ದಿನದಲ್ಲಿ ಭಾಗವಹಿಸುವಂತೆ ಮಾಡಿ ಯಶಸ್ವಿಗೊಳಿಸಲು ಸಿ ಐ ಟಿ ಯು ಕೇಂದ್ರವು ಕರೆ ಕೊಟ್ಟಿದೆ. ಹಿರೋಷಿಮ ದಿನಾಚರಣೆಯನ್ನು ಯಶಸ್ವಿಗೊಳಿಸಲು ಕಾರ್ಮಿಕ ಸಂಘಗಳು ಕೂಡಲೇ ಕಾರ್ಯೋನ್ಮುಖವಾಗಬೇಕು. ○

ಕಾಂಗ್ರೆಸ್‌ನಿಂದ ಗುಂಡೂರಾವ್ ಉಚ್ಛಾಟನೆ

ಕಾಂಗ್ರೆಸ್ ಪಕ್ಷದಿಂದ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಗುಂಡೂರಾವ್ ಅವರನ್ನು ಉಚ್ಛಾಟನೆ ಮಾಡಲಾಗಿದೆ. ಅವರ ಉಚ್ಛಾಟನೆಯಿಂದ ಕಾಂಗ್ರೆಸ್‌ಗೆ ಏನೂ ಬಾಧೆಯಿಲ್ಲವೆಂದು ಆ ಪಕ್ಷದ ಉಪಾಧ್ಯಕ್ಷ ಅರ್ಜುನ್ ಸಿಂಗ್ ಹಾಗೆಯೇ ಕರ್ನಾಟಕದ ಕಾಂಗ್ರೆಸ್ ಮುಖಂಡರೆಲ್ಲ ಸಾರುತ್ತಿದ್ದಾರೆ. ಆ ಅಭಿಪ್ರಾಯ ವಾಸ್ತವ ಪರಿಸ್ಥಿತಿಗೆ ಸರಿದೂಗುವುದಿಲ್ಲ ಎಂಬ ಸಂಗತಿ ಗುಂಡೂರಾವ್ ಅವರ ಉಚ್ಛಾಟನೆಯ ನಂತರ ಆ ಪಕ್ಷದಲ್ಲಿಯ ಈಗಿನ ಶಾಸಕರು, ಮಾಜಿ ಮಂತ್ರಿಗಳ ಹಾಗೆಯೇ ಆ ಪಕ್ಷದ ಘಟಕಗಳ ಮುಖಂಡರ ಹೇಳಿಕೆಗಳಿಂದಲೇ ಎದ್ದು ಕಾಣುತ್ತಿದೆ.

ಒಂದು ಪಕ್ಷದಿಂದ ಶಿಸ್ತುಬದ್ಧ ಕ್ರಮದಿಂದಾಗಿ ಯಾರನ್ನಾದರೂ ಹೊರಗೆ ಹಾಕಿದಾಗ, ಅದರತ್ತ ಗಮನ ಹರಿಸುವ ಅಗತ್ಯವೇನಿಲ್ಲ. ಆದರೆ ಇತ್ತೀಚೆಗೆ ಕಾಂಗ್ರೆಸ್ ಪಕ್ಷದಿಂದ ಕೆಲವು ಮುಖಂಡರ ಉಚ್ಛಾಟನೆ ಎಲ್ಲರ ಗಮನ ಸೆಳೆಯುತ್ತಿದೆ.

ಕಳೆದ 16-17 ವರ್ಷಗಳಿಂದಲೂ ಕಾಂಗ್ರೆಸ್ ಪಕ್ಷದ ಸಂಘಟನೆಯ ಚುನಾವಣೆ ನಡೆದೇ ಇಲ್ಲ. ಈ ವರ್ಷ ಚುನಾವಣೆ ನಡೆಸುತ್ತೇವೆಂದು ಸಾರುತ್ತಾ ಬಂದರೂ ಕೂಡ, ಅದು ಅಸಂಭವವೆಂದು ಕಂಡುಬರುತ್ತಿದೆ. ಕುಂಟುನೆಪ ಮುಂದೊಡ್ಡಿ ಅದನ್ನು ಮುಂದಕ್ಕೆ ಹಾಕಲಾಗುತ್ತಿದೆ. ಕಾಂಗ್ರೆಸ್ ಅಧ್ಯಕ್ಷರೇ ರಾಜ್ಯಗಳ ಅಧ್ಯಕ್ಷರನ್ನೂ, ಕಮಿಟಿಗಳನ್ನೂ, ಮನಬಂದಂತೆ ನೇಮಿಸುವ ಕ್ರಮ ಮುಂದುವರಿದಿದೆ. ಎಲ್ಲವೂ ತಾತ್ಪೂರ್ತಿಕವೇ ಪ್ರಜಾಪ್ರಭುತ್ವ ಪದ್ಧತಿ ಎಂಬುದೇ ಇಲ್ಲ.

ಎರಡನೆಯದಾಗಿ ರಾಜೀವ ಗಾಂಧಿ ಮತ್ತು ಅವರ ಸುತ್ತ ಮುತ್ತಲಿನ ಕೆಲವೇ ಜನರ ನಿರ್ದೇಶನದಂತೆ ದೇಶದ ಆರ್ಥಿಕ ನೀತಿ ನಿರೂಪಣೆಯಾಗುತ್ತಿದೆ. ರಾಜೀವ್ ಗಾಂಧಿಯವರು ತನ್ನ ತಾಯಿಯಂತೆಯೇ ಏಕವ್ಯಕ್ತಿ ಸರ್ವಾಧಿಕಾರದತ್ತ ಸಾಗಿದ್ದಾರೆ, ತನ್ನ ತಾಯಿಯನ್ನು ಮೀರಿಸುವ ನೀತಿ ಅಂದರೆ ವಿದೇಶಿ ಗುತ್ತೆದಾರರಿಗೆ ರಾಷ್ಟ್ರದ ಬಾಗಿಲನ್ನು ತೆರೆದಿಟ್ಟು, ದೇಶದ ಕೈಗಾರಿಕೆಗಳನ್ನು ನಾಶಮಾಡುವ, ಕಂಪ್ಯೂಟರೀಕರಣ, ಆಧುನೀಕರಣಗಳ ಹೆಸರಿನಲ್ಲಿ ನಿರುದ್ಯೋಗಿಗಳ ಸಂಖ್ಯೆ ವಿಶಾಲಗೊಳಿಸುವ ಆರ್ಥಿಕ ನೀತಿಯನ್ನು ಅನುಸರಿಸುತ್ತಿದ್ದಾರೆ. ಕೋಮುವಾದಿಗಳಿಗೆ, ಪಟ್ಟಭದ್ರ ಹಿತಾಸಕ್ತಿಗಳಿಗೆ ಶರಣು ಹೋಗುತ್ತಿದ್ದಾರೆ. ಮತೀಯ, ಛಿದ್ರಕಾರಿ, ಭಯೋತ್ಪಾದಕರ ನಾಶಕ್ಕೆ ತಕ್ಕಂಥ ದೃಢವಾದ ರಾಜಕೀಯ ನಿಲುಮೆ ಅನುಸರಿಸುತ್ತಿಲ್ಲ. ಆದರಿಂದಾಗಿ ದೇಶದ ಸಮಗ್ರತೆಯೇ ಅಪಾಯದಲ್ಲಿದೆ. ದೇಶದ ಐಕ್ಯತೆಯನ್ನು ಉಳಿಸಲು, ಜಾತೀಯ ಸೌಹಾರ್ದತೆಯನ್ನು ಕಾಪಾಡಲು, ವಿದೇಶೀಯರ ಕೈವಾಡದಿಂದ ದೇಶದ ಆರ್ಥಿಕತೆಯನ್ನು ರಕ್ಷಿಸಲು; ಕಾಂಗ್ರೆಸ್‌ಗೆ ಬದಲಾಗಿ ಸಿ. ಪಿ. ಐ. (ಎಂ) ಮುಖಂಡತ್ವದಲ್ಲಿ ಎಡ ಮತ್ತು

8 ನೇ ಪುಟ ನೋಡಿ

ರಾಮನಗರ ಗಲಭೆಯ ಖಂಡನೆ

ಕೋಮು ಗಲಭೆ ದಮನಕ್ಕೆ ಸಂಕಲ್ಪವನ್ನು ಕೇಂದ್ರ ಮಂತ್ರಿಗಳು ಲೋಕಸಭೆಯಲ್ಲಿ ಘೋಷಿಸಿದರು. ಆಳುವ ಪಕ್ಷಕ್ಕೆ ರಾಜಕೀಯ ನಿರ್ಧಾರವೇ ಇಲ್ಲದಿರುವುದರಿಂದಲೇ ದೇಶದಲ್ಲಿ ಕೋಮು ಗಲಭೆ ಹಿಂಸಾಚಾರಗಳು ನಡೆದಿವೆಯೆಂದು ಎಲ್ಲಪಕ್ಷಗಳಸದಸ್ಯರುಲೋಕಸಭೆಯಲ್ಲಿ ತೀವ್ರ ಆತಂಕ ವ್ಯಕ್ತ ಮಾಡಿದರು.

ಲೋಕ ಸಭೆಯಲ್ಲಿಜಾತೀಯ ಗಲಭೆಗಳ ಕುರಿತು ಗಂಭೀರ ಚರ್ಚೆನಡೆಯುತ್ತಿದ್ದಂತೆಯೇ ಬೆಂಗಳೂರಿನ 40 ಕಿ. ಮೀಟರ ದೂರದ ರಾಮನಗರದಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ಭೀಕರ ಗುಂಪು ಘರ್ಷಣೆ, ಅಗ್ನಿಸ್ಪರ್ಶ, ಗೋಲಿಬಾರ್ ನಡೆದು, ಹಲವಾರು ಜನರಿಗೆ ಜಖಂ ಆಗಿ, ಒಬ್ಬ ಸಾಯುವಂತಾಗಿರುವುದು ಅತ್ಯಂತ ದುರದೃಷ್ಟಕರ. ಭೂಮಿ ಜಗಳ, ಹೆಂಗಸರ ತಂಟೆ, ಹುಡುಗರ ಬೈದಾಟಗಳೆಲ್ಲ ಜಾತೀಯ ದಂಗೆಯ ರೂಪತಾಳಿ, ಆಸ್ತಿಪಾಸ್ತಿಗೆ ಹಾನಿಯಾಗಿ, ಗೋಳಿಬಾರಿಗೆ ಅವಕಾಶ ಮಾಡಿಕೊಡುತ್ತಿರುವುದನ್ನು ನೋಡುವಾಗ ನಮ್ಮ ದೇಶದ ಜನ ಈಗಲೂ ಕೂಡ ಮತಾಂಧರಿಗೆ ಎಷ್ಟು ಬೇಗ ಬಲಿಯಾಗುತ್ತಿದ್ದಾರೆಂಬುದನ್ನು ತೋರಿಸಿಕೊಡುತ್ತದೆ.

ಕೋಮುವಾದ ಹಿಂಸಾಚಾರಗಳ ವಿರುದ್ಧ ತೀವ್ರಕ್ರಮಕೈಗೊಳ್ಳುತ್ತೇವೆಂದು ಬರೀ "ಸಂಕಲ್ಪ" ವನ್ನು ವ್ಯಕ್ತಮಾಡಿದರೆ ಮಾತ್ರ ಸಾಲದು ದೃಢವಾದ ನಿಷ್ಠೂರ ರಾಜಕೀಯ ನಿಲುಮೆ ಅತ್ಯಗತ್ಯ.

ಪ. ಬಂಗಾಲ, ತ್ರಿಪುರಗಳ ಎಡರಂಗ ಸರಕಾರಗಳಿಗೆ ಅಂಥ ದಂಗೆಗಳನ್ನು ಕೂಡಲೇ ಶಮನ ಮಾಡಲು ಸಾಧ್ಯವಾಗಿದೆ. ಇತರ ರಾಜಕೀಯ ಪಕ್ಷಗಳು ಆಳುವ ರಾಜ್ಯಗಳಲ್ಲಿ ಅದು ಯಾಕೆ ಸಾಧ್ಯವಾಗುತ್ತಿಲ್ಲ. "ಜಾತ್ಯಾತೀತ ದೃಢ ರಾಜಕೀಯ ನಿಲುಮೆಯ ಅಭಾವವೇ" ಅದಕ್ಕೆ ಮುಖ್ಯಕಾರಣವಲ್ಲವೇ ? ಹಾಗೆಯೇ ಆಳುವ ಬಂಡವಳಶಾಹಿ ಪಕ್ಷಗಳು ತಮ್ಮ ಅಧಿಕಾರ ಭದ್ರವಾಗುಳಿಯಲು, ಚುನಾವಣೆಗಳಲ್ಲಿ

(8ನೇ ಪುಟ ನೋಡಿ)

ಲೋಕಸಭೆಯಲ್ಲಿ ಕೇಳಿದ್ದು

ಕಳೆದ 7 ತಿಂಗಳಲ್ಲಿ ಕೇಂದ್ರ ತನಿಖಾ ಸಂಸ್ಥೆ (ಸಿ. ಬಿ. ಐ.) 139 ಕೇಂದ್ರ ಸರಕಾರಿ ನೌಕರರ ಮನೆಗಳನ್ನು ಶೋಧಿಸಿದೆ. ತಮ್ಮ ಆದಾಯಕ್ಕಿಂತ ಹೆಚ್ಚು ಹಣ ಸಂಗ್ರಹಣೆ,ನೋಟಿಸಗಾಂಕೆ ಸುಳ್ಳು ಪತ್ರ ಮತ್ತು ಅಪರಾಧಿ ವರ್ತನೆಗಳ ಕಾರಣಕ್ಕಾಗಿ ಈ ಶೋಧ.ಅಂಥ ಶೋಧದಲ್ಲಿ 72 ಕೋಟಿ ರೂಪಾಯಿಯ ಸ್ಥಿರ ಮತ್ತು ಚರ ಆಸ್ತಿ ವಶಪಡಿಸಿಕೊಳ್ಳಲಾಗಿದೆಂದು ಕೇಂದ್ರ ಮಂತ್ರಿ ಚಿದಂಬರ್ ಲೋಕಸಭೆಯಲ್ಲಿ ಹೇಳಿದ್ದಾರೆ.

ಬರಪರಿಹಾರ

ಏಳು ರಾಜ್ಯಸರಕಾರಗಳು ಈವರ್ಷ ರೂ. 1,೭01-01 ಕೋಟಿ ಬರಪರಿಹಾರ ಸಹಾಯ ಕೇಳಿವೆ. ಕೇಂದ್ರ ಈ ತನಕ ರೂ.2೬8.30 ಕೋಟಿಸಹಾಯ ನೀಡಿದೆ. ಆಂಧ್ರ ಸರಕಾರ ರೂ. 326 ಕೋಟಿ ಸಹಾಯ ಬೇಡಿದೆ. ಆದರ ಕುರಿತು ಇನ್ನೂ ವಿಚಾರ ನಡೆದಿದೆಂದು ಕೃಷಿಮಂತ್ರಿ ಧಿಲನ್ ಹೇಳಿದ್ದಾರೆ.

ಪ್ರಾಥಮಿಕ ಶಿಕ್ಷಣ 1985-86ರ ಶೇ. 96.3 ರಷ್ಟು ಮಕ್ಕಳಿಗೆ (ಹೆಣ್ಣು ಗಂಡು ಸೇರಿ) ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ ಮಾಡಲಾಗಿದೆಂದು ಶಿಕ್ಷಣ ಮಂತ್ರಿ ಶ್ರೀಮತಿ ಸಾಹಿ ಹೇಳಿದ್ದಾರೆ.

ಉಕ್ಕು ಕಾರ್ಖಾನೆ

7ನೇ ಪಂಚವಾರ್ಷಿಕ ಯೋಜನೆಯಲ್ಲಿ ಹೊಸ ಉಕ್ಕು ಕಾರ್ಖಾನೆಗಳ ಸ್ಥಾಪನೆಯಿಲ್ಲ. ಹೊಸ ಉಕ್ಕು ಕಾರ್ಖಾನೆ ಯೋಜನೆಗಳಿಗಾಗಿ ಬರೇ ರೂ. 10 ಕೋಟಿ ಮಾತ್ರ ಒದಗಿಸಲಾಗಿದೆ. ಆದರೂ ಕೂಡ ವಿಜಯನಗರ ಮತ್ತು ದೈತಾರಿಗಳಲ್ಲಿ "ಸ್ವಲ್ಪ" ಕೆಲಸವಷ್ಟೇ ನಡೆದಿದೆ ಎಂದು ಉಕ್ಕು ಮಂತ್ರಿ ಪಂತ ಹೇಳಿದರು.

ಬಟ್ಟೆ ಗಿರಣಿ

ರಾಷ್ಟ್ರೀಯ ಬಟ್ಟೆಗಿರಣಿ ಕಾರ್ಪೊರೇಶನ್ (ಎನ್. ಟಿ. ಸಿ.) ರೂ. 100 ಕೋಟಿ ಹಾನಿ ಅನುಭವಿಸಿದೆ. ಎನ್‌ಟಿಸಿ ವಶಪಡಿಸಿಕೊಂಡ ಬಟ್ಟೆಗಿರಣಿಗಳೆಲ್ಲ "ಅಸಕ್ತಿಯ ಸ್ಮಾರಕ"ಗಳಾಗಿವೆ ಆದರೂ ಈಗ ಹಾನಿ ಇಳಿಮುಖವಾಗುತ್ತಿದೆ ಎಂದು ಬಟ್ಟೆಗಿರಣಿ ಮಂತ್ರಿ ಕುರ್ಶಿದ ಆಲಂ ಖಾನ್ ಹೇಳಿದ್ದಾರೆ.

ಬ್ಯಾಂಕ ಲೂಟಿ

ಕಳೆದ 6 ತಿಂಗಳಲ್ಲಿ ದೇಶದ ನಾನಾ ಭಾಗಗಳಲ್ಲಿಯ ಬ್ಯಾಂಕ್‌ಗಳಿಂದ ಒಂದು ಕೋಟಿ 50 ಲಕ್ಷ ರೂಪಾಯಿ ಲೂಟಿಯಾಗಿದೆ. ಅದರ ಪೈಕಿ ಅಸ್ಸಾಂನಲ್ಲಿ ರೂ. 41.88 ಲಕ್ಷ; ಪಂಜಾಬಿನಲ್ಲಿ ರೂ. 29.31 ಲಕ್ಷ, ಮಹಾರಾಷ್ಟ್ರದಲ್ಲಿ 20.93ಲಕ್ಷ ಲೂಟಿಯಾಗಿದೆಂದು ಅರ್ಥಮಂತ್ರಿ ಜನಾರ್ಧನ ಪೂಜಾರಿ ಹೇಳಿದ್ದಾರೆ.

ಜಾತೀಯ ದಂಗೆಗಳು

ಈ ವರ್ಷ ದೇಶದಲ್ಲಿ ಜಾತೀಯ ದಂಗೆಗಳು ಹೆಚ್ಚಾಗಿವೆ. ಶಂಕರಾಚಾರ್ಯ ಬುದ್ಧ, ಮಹಾವೀರ, ಅಶೋಕ,ಚಿಸ್ತಿ, ಕಬೀರ, ನಾನಕ, ಮಹಾತ್ಮಾ ಗಾಂಧಿಯವರ ಭೂಮಿಯಲ್ಲಿ ದ್ವೇಷ ಮತ್ತು ಧರ್ಮಾಂಧತೆಯ ಸುಳಿಗಾಳಿ ಎದ್ದಿದೆ. ನಮ್ಮನ್ನೆದುರಿಸುವ ಈ ಅಪಾಯವನ್ನು ಗುರ್ತಿಸಿ, ಈ ಜಾತೀವಾದದ ವಿರುದ್ಧ ಹೋರಾಟ ಮಾಡಲು ಭಿನ್ನಾಭಿಪ್ರಾಯಗಳನ್ನು ಬಿಟ್ಟುಬಿಡಿ ಎಂದು ಗೃಹ ಮಂತ್ರಿ ಬೂಟಾಸಿಂಗ ಹೇಳಿದರು.

ದಲಿತರ ಮೇಲೆ ದಾಳಿ

ಕಳೆದ 6 ತಿಂಗಳಲ್ಲಿ ದಲಿತರ ಮೇಲೆ 4690 ಮಾನಭಂಗ 177 ಕೊಲೆಗಳು 238 ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆದಿವೆ. ಅದೇ ಸಮಯದಲ್ಲಿ ಗುಡ್ಡಗಾಡು ಜನರ ಮೇಲೆ 1457 ಕ್ರೈಮ್‌ಗಳು, 53 ಕೊಲೆ, 107 ಮಾನಭಂಗ ನಡೆದಿವೆಯೆಂದು ಕಲ್ಯಾಣ ಮಂತ್ರಿ ಗಿರಿಧರ ಗೊಮಂಗೋ ಹೇಳಿದರು.

ಎಷ್ಟು ದಾವೆಗಳು ಬಾಕಿ

ಸುಪ್ರೀಂ ಕೋರ್ಟಿನಲ್ಲಿಸಂವಿಧಾನಕ್ಕೆ ಸಂಬಂಧಪಟ್ಟ 10,603 ಖಟ್ಲೆಗಳೂ, ರಾಜ್ಯಗಳಲ್ಲಿ ಮೂರೂವರೆ ಲಕ್ಷ ರಿಟ್‌ಗಳೂ ಖುಲಾಸೆಯಾಗದೆ ಉಳಿದಿವೆ. ಅಲಹಾಬಾದ ಹೈಕೋರ್ಟಿನಲ್ಲಿ 1,00,344 ಕರ್ನಾಟಕ 62,433 ಮದ್ರಾಸ್ 37112 ಬಾಕಿ ಉಳಿದಿವೆ.

○

ಉಕ್ಕಿನ ಪ್ರಾಧಿಕಾರದ ಅಧ್ಯಕ್ಷ ರಾಜೀನಾಮೆ ಕೊಡಲಿ

ಉಕ್ಕಿನ ಪ್ರಾಧಿಕಾರದಅಧ್ಯಕ್ಷರಾದ ಕೃಷ್ಣಮೂರ್ತಿಯವರು ರಾಜೀನಾಮೆ ಕೊಡಬೇಕೆಂದು ಪಶ್ಚಿಮ ಬಂಗಾಲದ ಸಿಐಟಿಯು ಉಪಾಧ್ಯಕ್ಷರಾದ ನಿರೇನ್ ಘೋಷ್ ಅವರು ಒತ್ತಾಯಿಸಿದ್ದಾರೆ. ಅಧ್ಯಕ್ಷರ ಕೈವಾಡದಿಂದ ಪ ಬಂಗಾಲದ ಮೂರು ಉಕ್ಕುಕಾರ್ಖಾನೆಗಳನ್ನು ಮುಚ್ಚುವ ಪ್ರಯತ್ನ ನಡೆದಿದೆಂದು ಆರೋಪಿಸಿದ್ದಾರೆ. 1969-70 ರಲ್ಲಿ ಕೇಂದ್ರ ಸರಕಾರ ದುರ್ಗಾಪುರ ಉಕ್ಕು ಕಾರ್ಖಾನೆ ಮುಚ್ಚುವ ಪ್ರಯತ್ನ ನಡೆಸಿತ್ತು. ಆದರೆ ಕಾರ್ಮಿಕರು ಧೈರ್ಯದಿಂದ ಹೋರಾಟ ಮಾಡಿದರು. ಎಡಪಕ್ಷಗಳ ಲೋಕಸಭಾ ಸದಸ್ಯರು ಮಧ್ಯಪ್ರವೇಶಿಸಿದರು. ಉಕ್ಕಿನ ಕಾರ್ಖಾನೆ ಉಳಿಯಿತು. ದುರ್ಗಾಪುರ ಉಕ್ಕಿನ ಕಾರ್ಖಾನೆಯ ಆಡಳಿತೆಯ ಕುರಿತು ನೇಮಿಸಿದ್ದ ಪಾಂಡೆಕಮಿಟಿ "ಕೆಟ್ಟ ಆಡಳಿತೆ, ಹಳೇಕಾಲದ ಮಶಿನರಿ, ವ್ಯವಸ್ಥೆಯಲ್ಲಿ ನಿರ್ಲಕ್ಷ"ಗಳೇ ಕಾರ್ಖಾನೆಯ ದುರವಸ್ಥೆಗೆ ಕಾರಣವೆಂದು ಅಭಿಪ್ರಾಯ ಪಟ್ಟಿದೆ.

ಹೋದ ಲೋಕಸಭೆಯ ಚುನಾವಣೆಯ ಮುಂಚೆ ಆಗ ಅರ್ಥಿಕ ಮಂತ್ರಿಯಾಗಿದ್ದ ಪ್ರಣಬ ಮುಖರ್ಜಿಯವರು ದುರ್ಗಾಪುರ ಉಕ್ಕಿನ ಕಾರ್ಖಾನೆಯ ವಿಸ್ತರಣೆ, ಆಧುನೀಕರಣಗಳಿಗಾಗಿ ರೂ 1200 ಕೋಟಿ ಖರ್ಚುಮಾಡಲಾಗುವುದೆಂದು ಪದೇ ಪದೇ ಹೇಳುತ್ತಲೇ ಬಂದಿದ್ದರು. ಆದು ಕಾರ್ಯರೂಪದಲ್ಲಿ ಬಂದಿಲ್ಲ. ಅತಿ ತೆಳುವಾದ ಸ್ಟೈನ್‌ಲೆಸ್ ಸ್ಟೀಲ್ ತಗಡನ್ನು ಉತ್ಪಾದಿಸುವ ಉದ್ದೇಶ ಹೊಂದಿದ್ದರೂ ಕೂಡದುರ್ಗಾಪುರದಲ್ಲಿ ದಪ್ಪನಾದ ಉಕ್ಕಿನ ಸಳಾಯಿ ಮತ್ತು ತಗಡುಗಳನ್ನಷ್ಟೆ ಉತ್ಪಾದನೆ ಮಾಡಲಾಗುತ್ತಿದೆ.

ರೂ 1000 ಕೋಟಿ ಬೆಲೆಯ ಭಾರತದ ಕಬ್ಬಿಣ ಮತ್ತು ಉಕ್ಕು ಕಂಪನಿಯನ್ನು(ಇಸ್‌ಕೋ) ಬರೇ ರೂ 9 ಕೋಟಿ ಪರಿಹಾರಕೊಟ್ಟು 1978 ರಲ್ಲಿ ಕೇಂದ್ರ ಸರಕಾರ ರಾಷ್ಟ್ರೀಕರಣಗೊಳಿಸಿತ್ತು. ಅಷ್ಟು ದೊಡ್ಡ ಕಾರ್ಖಾನೆ ಈಗ ನಾಶದ ಅಂಚಿನಲ್ಲಿದೆ. ಕೇಂದ್ರ ಮತ್ತು ಉಕ್ಕಿನ ಪ್ರಾಧಿಕಾರ ಕೂಡಿ ಈ ರಾಷ್ಟ್ರೀಕೃತ ಉಕ್ಕಿನ ಕಾರ್ಖಾನೆಗಳೆಲ್ಲ ದೇಶಕ್ಕೆ ಅನಾವಶ್ಯಕ ಭಾರವಾಗಿವೆಂದು ಅಪಪ್ರಚಾರ ಮಾಡುತ್ತಿವೆ. ತೆಳುವಾದ ಸ್ಟೈನ್‌ಲೆಸ್ ಸ್ಟೀಲನ್ನು ಈ ಕಾರ್ಖಾನೆಗಳಲ್ಲಿ ಉತ್ಪಾದನೆ ಮಾಡದೆ, ಅದನ್ನು ವಿದೇಶಗಳಿಂದ ಆಮದು ಮಾಡಲಾಗುತ್ತಿದೆ. ಉಕ್ಕಿನ ಕಾರ್ಖಾನೆಗಳನ್ನು ಆಧುನೀಕರಿಸಲು ಸೋವಿಯತ್ ರಶ್ಯಾ ಒಪ್ಪಿಕೊಂಡಿದ್ದರೂ ಕೂಡ ಕೇಂದ್ರಸರಕಾರ ಕಣ್ಣುಮುಚ್ಚಾಲೆಯಾಡುತ್ತಿದೆ. ದುರ್ಗಾಪುರ, ಇಸ್‌ಕೋ, ಕಾರ್ಖಾನೆಗಳನ್ನು ಆಧುನೀಕರಿಸಿ ವಿಸ್ತರಿಸಿ ತೆಳುವಾದ ಸ್ಟೈನ್‌ಲೆಸ್ ಸ್ಟೀಲ್ ತಗಡು ಉತ್ಪಾದಿಸದಿದ್ದರೆ ಈಶಾನ್ಯಭಾಗವನ್ನು ಆರ್ಥಿಕವಾಗಿಯೂ, ಔದ್ಯೋಗಿಕವಾಗಿಯೂ ಕಡೆಗಣಿಸಿದಂತಾಗುತ್ತದೆ. ವಿದೇಶೀ ಗುತ್ತೇದಾರರ ಪರವಾದ ನೀತಿಯನ್ನು ರಾಜೀವ್ ಗಾಂಧಿ ಅನುಸರಿಸುತ್ತಿರುವುದು ಪ. ಬಂಗಾಲಕ್ಕೆ ಹಾಗೆಯೇ ಈಶಾನ್ಯ ಭಾಗದ ರಾಜ್ಯಗಳಿಗೆ ಅಪಾಯಕಾರಿಯಾಗಿದೆ. ಅಂಥ ನೀತಿಯ ವಿರುದ್ಧ ಹೋರಾಡಲು ಸಿ ಐ ಟಿ ಯು ನಿರ್ಧರಿಸಿದೆ.

()

ಸಿಂಧನೂರು ಸರದಿ ಉಪವಾಸ ಮುಕ್ತಾಯ

ಸಿಂಧನೂರು ನಗರ ಸಭೆಗೆ 1983 ರಲ್ಲಿ ಕಾಂಗ್ರೆ ಪಕ್ಷವು ಅಧಿಕಾರಕ್ಕೆ ಬಂದು ಸಾರ್ವಜನಿಕರ ಬೇಡಿಕೆಗಳನ್ನು ಈಡೇರಿಸುವಲ್ಲಿ ವಿಫಲವಾದ ಕಾರಣ ಸ್ವಜನಪಕ್ಷಪಾತ, ಅನ್ಯಾಯಗಳಿಂದ ಕೂಡಿದ್ದಕ್ಕಾಗಿ ಸ್ಥಳೀಯ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ನಾಗರಿಕರ ಬೇಡಿಕೆಗಳನ್ನು ಒತ್ತಾಯಿಸಿ ದಿನಾಂಕ 6-5-86ರಂದು ಖಾಲಿಕೊಡಗಳ ಮೆರವಣಿಗೆ ಏರ್ಪಡಿಸಿತ್ತು.

ನಂತರ ದಿನಾಂಕ 18-5-86 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷ ಹಾಗೂ ಯುವ ಜನತಾ ಪಕ್ಷ, ವಿಕಾಸ ಯುವಕ ಮಂಡಳ, ಟೇಲರ್ಸ್ ಯೂನಿಯನ್, ಮಹಿಳಾ ಸಂಘಟನೆ, ಸಿಐಟಿಯು, ಕರ್ನಾಟಕ ಪ್ರಾಂತರೈತ ಸಂಘ, ಎಸ್.ಎಫ್.ಐ, ಡಿವೈಎಫ್ಐ ಸಂಘಟನೆಗಳೊಂದಿಗೆ ನಾಗರಿಕ ಹೋರಾಟ ಸಮನ್ವಯ ಸಮಿತಿಯನ್ನು ರಚಿಸಿಕೊಂಡು ದಿನಾಂಕ 26-5-86 ರಿಂದ 15-6-86 ರ ವರೆಗೆ ಸಹಿ ಸಂಗ್ರಹಣಾ ಕಾರ್ಯಕ್ರಮವನ್ನು ಹಮ್ಮಿಕೊಂಡು, ಸಹಿ ಸಂಗ್ರಹಣಾಯಾದಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ಇದಕ್ಕೂ ಪುರಸಭಾ ಆಡಳಿತ ವರ್ಗ ಮಣಿಯದಿದ್ದಾಗ ದಿ. 23-6-86 ರಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ನಾಗರಿಕ ಹೋರಾಟ ಸಮನ್ವಯ ಸಮಿತಿ ಪ್ರಾರಂಭಿಸಿತು.

ಈ ಸತ್ಯಾಗ್ರಹ ಹನ್ನೆರಡು ದಿನಗಳ ಕಾಲ ನಡೆಯಿತು. ನಂತರ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ದಿ 1-7-86 ರಂದು ತಕ್ಷಣ ಈಡೇರುವ ಬೇಡಿಕೆಗಳನ್ನು ಮತ್ತು ಶಾಶ್ವತ ಕುಡಿಯುವ ನೀರಿನ ಪರಿಹಾರದ ಬಗ್ಗೆ ರಾಜ್ಯ ಸರ್ಕಾರದ ಗಮನಕ್ಕೆ ತರುವದಾಗಿ ಜಿಲ್ಲಾಧಿಕಾರಿಗಳು ಹೇಳಿದ್ದರಿಂದ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲಾಯಿತು ಎಂಬುದಾಗಿ ವರದಿ ತಿಳಿಸಿದೆ.

ಈ ಸತ್ಯಾಗ್ರಹ ಮತ್ತು ಹೋರಾಟದ ಉದ್ದೇಶವನ್ನು ಜನತೆಗೆ ತಿಳಿಸಲು ದಿ. 6-7-86 ರಂದು ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಆಧ್ಯಕ್ಷತೆಯನ್ನು ಶರಬಣ್ಣ ನಾಗಲಾಪೂರ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಾಂ. ಚಂದ್ರಶೇಖರ ಬಾಳೆ ಸಿ ಪಿ ಐ (ಎಂ) ಜಿಲ್ಲಾ ಸಮಿತಿ ರಾಯಚೂರು ಹಾಗೂ ಶ್ರೀಮತಿಹರಿಣಿ ಕಕ್ಕೇರಿ ಕಾರ್ಯದರ್ಶಿ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಇವರು ಮತ್ತು ಕರಿಗಣನಾಥ ಖಂಡಿಮಠ ಅಧ್ಯಕ್ಷರು ಯುವ ಜನತಾ ಪಕ್ಷ ಬಾಸುಮಿಯಾ ಸಿಪಿಐ(ಎಂ) ನಾರಾಯಣ ಕಿಲ್ಲೇದ ಡಿವೈಎಫ್ಐ ಇವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಪ್ರಾರಂಭದಲ್ಲಿ ಶ್ರೀ ಡಿ. ಎಸ್. ಕಲ್ಮಠ ವಕೀಲರು ಸ್ವಾಗತಿಸಿದರುಕೊನೆಯಲ್ಲಿ ಬಾಸುಮಿಯಾ ವಂದನಾರ್ಪಣೆ ಮಾಡಿದರು ಎಂಬುದಾಗಿ ಪತ್ರಿಕಾ ಹೇಳಿಕೆ ತಿಳಿಸಿದೆ.

()

ರೈತರ ಮೆರವಣಿಗೆ

ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಹಗರಿಬೊಮ್ಮನಹಳ್ಳಿ ತಾಲೂಕಿನ ಚಿಂಕರಪಳ್ಳಿ ಹಾಗೂ ಹಂಪಾಪಟ್ಟಣ ಗ್ರಾಮಗಳ ಜನರು ಜುಲೈ 14 ರಂದು ಮೆರವಣಿಗೆಯಲ್ಲಿ ಬಂದು ತಹಶೀಲ್ದಾರ ಹಾಗೂ ಬಿಡಿಓ ಅವರುಗಳಿಗೆ ಮನವಿಯನ್ನು ಅರ್ಪಿಸಿದರೆಂದು ವರದಿಯಾಗಿದೆ. ಮನವಿಲ್ಲಿಯ ಗ್ರಾಮದ ಜನರಿಗೆ ಹಸಿರು ಕಾರ್ಡುಗಳನ್ನು ವಿತರಿಸಬೇಕೆಂದೂ ಚರಂಡಿ ಹಾಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕೆಂದೂ ಬೀದಿ ದೀಪಗಳ ವ್ಯವಸ್ಥೆ ಮಾಡಬೇಕೆಂದೂ ತಾಲೂಕಿನಲ್ಲಿ ಸಾಕಷ್ಟು ಮಳೆಯಾಗದಿರುವುದರಿಂದ ಕಾಮಗಾರಿ ಕೆಲಸಗಳನ್ನು ಮುಂದುವರಿಸಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಹನಸಿಕೆರೆ ಹೂಳೆತ್ತುವ ಕಾರ್ಯ ಮುಗಿದು ಒಂದೂವರೆ ತಿಂಗಳು ಕಳೆದರೂ ಅಲ್ಲಿ ಕೆಲಸ ಮಾಡಿದ ಕೂಲಿಕಾರರಿಗೆ ಇನ್ನೂ ಕೂಲಿ ಕೊಡದಿರುವ ಬಗ್ಗೆ ರೈತ ಸಂಘವು ಸಂಬಂಧಿಸಿದ ಅಧಿಕಾರಿಗಳನ್ನು ಕಂಡು ಚರ್ಚಿಸಿದೆ. ಕೂಲಿ ವಿತರಣೆ ಕೂಡಲೇ ಆಗದಿದ್ದರೆ ರಸ್ತೆತಡೆ ಚಳವಳಿ ನಡೆಸುವುದಾಗಿ ಎಚ್ಚರಿಸಿದೆ. ಮೆರವಣಿಗೆಯ ನೇತೃತ್ವವನ್ನು ಕಾ. ವೀರಸಂಗಯ್ಯ, ಕಾ. ಮಹದೇವ ಪಾಟೀಲ, ಕಾ. ಎಂ. ಪುಟ್ಟಪ್ಪ, ಕಾ. ಸಕ್ರಪ್ಪ ಮುಂತಾದವರು ವಹಿಸಿದ್ದರೆಂದು ಪ್ರಕಟನೆ ತಿಳಿಸಿದೆ.

ಕುಡಿಯುವ ನೀರು–ರೋಗದ ತವರು

ಈಗ ಎಲ್ಲ ಕಡೆ ಮಳೆ. ಕೆರೆಕಟ್ಟೆ ಜಲಾಶಯಗಳು ತುಂಬಿರವಿದ್ದರೂ ಕುಡಿಯುವ ನೀರಿಗಿದ್ದ ಬರ ಸ್ವಲ್ಪಸ್ವಲ್ಪವಾಗಿ ಹರಿಯುತ್ತಾ ಇದೆ. ಜನರಿಗೆ ಸಂತಸ ಆದರೆ ಅದರ ಜೊತೆಯಲ್ಲಿಯೇ ಅಸಂಖ್ಯಾತ ಮಕ್ಕಳಿಗೆ ವಯಸ್ಕರಿಗೆ ಬೇಧಿ, ವಾಂತಿ, ಆಮಶಂಕೆ ಕೆಲವು ಕಡೆ ಕಾಲರಾ ಕೂಡ. ಟೈಫಾಯಿಡ್, ಪಾರ್ಯಾಟೈ ಫಾಯಿಡ್ ಅದರಹಿಂದೆಯೇ.

ನಮ್ಮ ದೇಶದಲ್ಲಿ, 1 ಲಕ್ಷ ಶಿಶುಗಳಲ್ಲಿ ಸುಮಾರು 940 ಶಿಶುಗಳು(ಒಂದು ವರ್ಷದ ಒಳಗಿನ ಶಿಶುಗಳು) ಸಾಯಲು ಇದೇ ಕಾರಣವಾಗಿದೆ. ಹಳ್ಳಿಗಳಲ್ಲಿ ಶುದ್ಧ ನೀರಿನ ಪೂರೈಕೆ ಹಾಗೂ ನೈರ್ಮಲ್ಯ ವ್ಯವಸ್ಥೆ ಮಾಡಿದ್ದೇ ಆದಲ್ಲಿ ಶೇ. 60 ರಷ್ಟು ರೋಗಗಳನ್ನು ತಡೆಯಲು ಸಾಧ್ಯ ಇದೆ.

ಬೆಂಗಳೂರು ನಗರದ ಕುಡಿಯುವ ನೀರಿನ ಪೈಪುಗಳ ಬಳಿಯಲ್ಲಿಯೇ ಒಳಚರಂಡಿ ವ್ಯವಸ್ಥೆಯ ಪೈಪುಗಳು ಒಡೆದು ಹೋಗಿ ಶಿವಾಜಿನಗರ ಕಂಟೋನ್ಮೆಂಟ್ ಸುತ್ತಮುತ್ತಲಿನ ಅನೇಕ ವಿಸ್ತರಣಗಳಲ್ಲಿಯೂ ರಾಜಾಜಿನಗರ ಹಾಗೂ ಅದಕ್ಕೆ ಹೊಂದಿಕೊಂಡಿರುವ ಕಾಲನಿಗಳಲ್ಲಿಯೂ ಅನೇಕ ಜನ ಬೇಧಿ, ಆಮಶಂಕೆ ವಾಂತಿಬೇಧಿಗಳಿಗೆ ತುತ್ತಾದುದನ್ನು ಕಾಲರಾ ಭಯವೂ ತಲೆ ದೋರಿದುದನ್ನು ಪತ್ರಿಕೆಗಳಲ್ಲಿ ಓದಿದ್ದೀರಿ.

ನಮ್ಮ ದೇಶದಲ್ಲಿ ಸುಮಾರು 5.7 ಲಕ್ಷ ಹಳ್ಳಿಗಳಿದ್ದು, ಅವುಗಳಲ್ಲಿ ಕೇವಲ 24 ಸಾವಿರ ಹಳ್ಳಿಗಳಲ್ಲಿ ಕುಡಿಯಲು ಯೋಗ್ಯವಾದ, ಆರೋಗ್ಯಕರವಾದ ಶುದ್ಧ ನೀರು ಪೂರೈಕೆ ಆಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಸುಮಾರು 4 ಲಕ್ಷ ಹಳ್ಳಿಗಳಲ್ಲಿ ಕುಡಿಯುವ ನೀರು ಸಿಕ್ಕಿದರೂ ಅದು ಕುಡಿಯಲು ಯೋಗ್ಯವಾಗಿಲ್ಲ. ರೋಗಾಣುಗಳು ಮಾತ್ರವಲ್ಲದೇ, ಕೈಕಾಲುಗಳನ್ನು ಸೊರಗಿಸಿ ಕುಂಟುಮಾಡುವ, ಹಲ್ಲುಗಳನ್ನು ಹುಳುಕು ಮಾಡುವ ಅಪಾಯಕಾರಿ ಉಪ್ಪು ನೀರಿನಿಂದಲೂ ಬಾಧೆಗೊಳಗಾಗುತ್ತಾರೆ, ಕೆರೆಗಳೂ, ನದಿಗಳೋ ರೋಗಾಣುಗಳ ಅಗರವಾಗಿದ್ದು, ರೋಗಗಳನ್ನು ಹರಡುವ ಮಾಧ್ಯಮವಾಗುತ್ತದೆ.

ಸುಮಾರು 1.5 ಲಕ್ಷ ಹಳ್ಳಿಗಳಲ್ಲಿ ನೀರಿನ ಭಾರಿ ಸಮಸ್ಯೆ ಇದೆ. ನೀರಿಗಾಗಿ ಮೈಲುಗಟ್ಟಲೆ ನಡೆಯುವ ಇಂತಹ ಹಳ್ಳಿಗಳ ಜನರನ್ನು ನೋಡಿ ನಿಮ್ಮ ಮನಸ್ಸು ಕರಗಿಲ್ಲವೇ ? ಸರಕಾರದ ಸಾವಿರಾರು ಕಾರ್ಯಕ್ರಮದ ಬೊಗಳೆ ಸಾಧನೆ ದಿನದಿಂದ ದಿನಕ್ಕೆ ಏರುತ್ತಿದೆ. 1971 ರಲ್ಲಿ ಇಂತಹ ಹಳ್ಳಿಗಳು 1.5 ಲಕ್ಷವಾಗಿದ್ದರೆ, 1980 ರಲ್ಲಿ ಇಂತಹ ಹಳ್ಳಿಗಳ ಸಂಖ್ಯೆ 2.3 ಲಕ್ಷವಾಗಿದೆ.

ನೀರಿನ ಪೂರೈಕೆಯ ವ್ಯವಸ್ಥೆ ಇದ್ದರೂ ಪಟ್ಟಣದ ಚಿತ್ರಣ ಹಳ್ಳಿಗಳಕ್ಕಿಂತ ಭಿನ್ನವಾಗಿಲ್ಲ. ಹಳ್ಳಿಗಳ ಆರ್ಥಿಕತೆಯ ನಾಶದಿಂದಾಗಿ, ಪಟ್ಟಣಗಳಿಗೆ ಜನಪ್ರವಾಹವಾಗಿ, ಯೋಜನಾರಹಿತವಾಗಿ ಬೆಳೆದು, ನೀರಿನ ಕೊರತೆ ನೀಗಿಸುವುದು ಕಷ್ಟವಾಗುತ್ತದೆ. ಅನೇಕ ಪಟ್ಟಣಗಳಲ್ಲಿ ನೀರಿನ ಪೂರೈಕೆಯ ವ್ಯವಸ್ಥೆ ಅತಿ ಹಳತಾಗಿದ್ದು. ಇದನ್ನು ದುರಸ್ಥಿ ಮಾಡುವುದೇ ದುಸ್ತರವಾಗಿದೆ. ನೀರನ್ನು ಸಾಗಿಸುವ ಕೊಳವೆಗಳು ಹಾಳಾಗಿದ್ದು, ಸೋರುವಿಕೆ ಪ್ರಾರಂಭವಾಗಿದೆ. ಕೆಟ್ಟ ಕೊಳಚೆ ನೀರಿನ ಪ್ರದೇಶದಲ್ಲಿ ನೀರಿನ ಪೈಪು ಒಡೆದರೆ ಏನಾಗಬಹುದು ?

ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಬಡವರಿಗಂತೂ ನೀರಿನ ಬವಣೆ ಹೇಳಲಾರದು. ನೀರಿನ ಅಭಾವ, ಶುದ್ಧ ಗಾಳಿಯ ಅಭಾವ, ನೈರ್ಮಲ್ಯತೆಯ ಅಭಾವ, ಜನಸಂಖ್ಯೆಯ ಒತ್ತಡ ಇವುಗಳಿಂದ ಪಟ್ಟಣಗಳ ಕೊಳಚೆ ಪ್ರದೇಶಗಳು ರೋಗಗಳ ಆಗರವಾಗಿರುತ್ತದೆ.

ನೀರಿನ ಸಮಸ್ಯೆಯಿಂದ ಬರುವ ರೋಗಗಳಿಂದ ನಮ್ಮ ದೇಶದಬಡ ಜನರ ಆದಾಯ ಎಷ್ಟು ನಷ್ಟವಾಗಿರಬಹುದು! ಕೂಲಿ ಕಳೆದುಕೊಂಡಿರಬಹುದು! ಇಂತಹ ನಷ್ಟ 7.3 ಕೋಟಿ ದಿನದ ಕೆಲಸದಷ್ಟು, ವೈದ್ಯಕೀಯ ಖರ್ಚು ಹಾಗೂ ಉತ್ಪಾದನೆಯ ನಷ್ಟ ಲೆಕ್ಕ ಹಾಕಿದರೆ ಇದು ವರ್ಷಕ್ಕೆ 450 ಕೋಟಿ ರೂ. ಗಳಿಂತಲೂ ಹೆಚ್ಚಾಗಿರುತ್ತದೆ. 1981–1890 ರ ವರೆಗಿನ ಹತ್ತು ವರ್ಷಗಳನ್ನು ಅಂತರಾಷ್ಟ್ರೀಯ ಕುಡಿಯುವ ನೀರಿನ ಪೂರೈಕೆ ಹಾಗೂ ನೈರ್ಮಲ್ಯದ ವರ್ಷಗಳೆಂದು ಸಾರಲಾಗಿದೆ. ಇದಕ್ಕಾಗಿ ಅಂತರ್ರಾಷ್ಟ್ರೀಯ ಯೋಜನೆಗಳನ್ನು ಹಾಕಿ ಕೊಳ್ಳಲಾಗಿದೆ. ಈ ಹತ್ತು ವರ್ಷಗಳ ಕಾರ್ಯಕ್ರಮಕ್ಕೆ ಇಡೀ ವಿಶ್ವದಲ್ಲಿ ಶಸ್ತ್ರಾಸ್ತ್ರಗಳಿಗಾಗಿ ಮಾಡುವ ವೆಚ್ಚದ ಬೇಕಾಗುವ ಹಣವನ್ನು ಕೇವಲ ಒಂದು ತಿಂಗಳಿನ ವೆಚ್ಚದಿಂದ ಇಡೀ ವಿಶ್ವದಲ್ಲಿ ಈ ಕುಡಿಯುವನೀರಿನಯೋಜನೆಯನ್ನು ಯಶಸ್ವಿಗೊಳಿಸಬಹುದೆಂದರೆನಿಮಗೆ ಆಶ್ಚರ್ಯವಾದೀತೆ? ಸಾಮ್ರಾಜ್ಯ ಶಾಹಿಗಳ ಯುದ್ಧಕೋರ ನೀತಿಯು ಬಡ ಜನರ ಕುಡಿಯುವ ನೀರನ್ನೂ ಬಿಟ್ಟಿಲ್ಲ. ನಮ್ಮ ದೇಶದಲ್ಲಿ ಶೇ. 100 ಹಳ್ಳಿಗಳಿಗೆ ನೀರಿನ ಪೂರೈಕೆ ಮಾಡಲು ಸುಮಾರು 7700 ಕೋಟಿ ರೂ, ಬೇಕಾಗಬಹುದು. ಆದರೆ 7ನೇ ಯೋಜನೆಯಲ್ಲಿ ಈ ಹಣದ ಅರ್ಧದಷ್ಟನ್ನೂ ಕೊಡಲಾಗಲಿಲ್ಲ.

(6ನೇ ಪುಟ ನೋಡಿ)

ಕರ್ನಾಟಕದಲ್ಲಿ

ಕರ್ನಾಟಕದಲ್ಲಿ ಕುಡಿಯುವ ನೀರಿನ ಸಮಸ್ಯೆ ಒಳಚರಂಡಿ ವ್ಯವಸ್ಥೆ ಘೋರವಾಗಿದೆ. ಮೊನ್ನಿನ ಬರಗಾಲದ ಸಮಯದಲ್ಲಿ ಪ್ರತಿ ಊರಿನ ಜನರು ಈ ಸಂಕಷ್ಟವನ್ನು ಅನುಭವಿಸಿದ್ದಾರೆ. ಪ್ರತಿಯೊಬ್ಬರಿಗೂ ಪ್ರತಿದಿನ ತಲಾ 250 ಲೀಟರ್‌ಗಿಂತ ಹೆಚ್ಚು ನೀರು ಅವಶ್ಯಕ. ಸುಗಮವಾದ ಒಳಚರಂಡಿ ವ್ಯವಸ್ಥೆ ರೂಪಿಸಬೇಕಾದರೆ ಕನಿಷ್ಟ ತಲಾ 150 ಲೀ. ನೀರು ಪ್ರತಿದಿನಲಭ್ಯವಾದರೆ ಮಾತ್ರ ಸಾಧ್ಯ ಎಂದು ತಜ್ಞರ ಅಭಿಪ್ರಾಯ.

ಆದರೆ ನಮ್ಮ ರಾಜ್ಯದಲ್ಲಿ ಬೆಂಗಳೂರಿನಲ್ಲಿ ದಿನಕ್ಕೆ 70 ಲೀ.ನೀರು ಮೈಸೂರಿನಲ್ಲಿ 144 ಲೀ. ನೀರು ಲಭ್ಯ ಉಳಿದ ಪಟ್ಟಣಗಳ ಸರಾಸರಿ 45 ಲೀ. ಗಿಂತ ಕಡಿಮೆ ರಾಜ್ಯದಲ್ಲಿರುವ 241 ಪಟ್ಟಣಗಳಲ್ಲಿ 84 ಪಟ್ಟಣಗಳಲ್ಲಿ ಮಾತ್ರ ಶುದ್ಧೀಕರಣದ ವ್ಯವಸ್ಥೆ. ಕೈಬೆರಳೆಣಿಕೆಯ ನಗರಗಳನ್ನು ಬಿಟ್ಟರೆ ಉಳಿದೆಲ್ಲಾ ಅಸ್ತವ್ಯಸ್ತ ಶುದ್ಧೀಕರಣ ವ್ಯವಸ್ಥೆಯೇ ಹೊರತು ಸರಿಯಾದ ಶುದ್ಧೀಕರಣ ವಲ್ಲ.

ಒಳಚರಂಡಿ ವ್ಯವಸ್ಥೆ : 241 ನಗರ ಪಟ್ಟಣಗಳಲ್ಲಿ ಕೇವಲ 14 ನಗರಗಳಲ್ಲಿ ಮಾತ್ರ ಒಳಚರಂಡಿ ವ್ಯವಸ್ಥೆ ಇದೆ.

ಒಳಚರಂಡಿ ವ್ಯವಸ್ಥೆ ಇರುವ ನಗರವಾದ ಬೆಂಗಳೂರಿನಲ್ಲಿಯೇ ಕುಡಿಯುವ ನೀರಿಗೆ ಚರಂಡಿ ನೀರು, ಮಲ ಬೆರೆತರೆ ಒಳಚರಂಡಿವ್ಯವಸ್ಥೆಯಿಲ್ಲದ ನಗರ, ಪಟ್ಟಣಗಳ, ಹಳ್ಳಿಗಳ ಪಾಡೇನು ? ಮಲಮೂತ್ರಗಳು,ಅವುಗಳಲ್ಲಿ ಸೇರಿರುವ ನೂರಾರು ಕ್ರಿಮಿಗಳು ಯಾವ ಅಡೆತಡೆಯೂ ಇಲ್ಲದೆ ನೂರಾರು ದಾರಿಗಳ ಮೂಲಕ ಕುಡಿಯುವ ನೀರನ್ನು ಕೊಡಿಸುತ್ತವೆ ಅಸಂಖ್ಯ ರೋಗಗಳಿಗೆ ಕಾರಣವಾಗುತ್ತವೆ.

ಮನುಷ್ಯನ ಕಾಲುಗಳಲ್ಲಿ ೪–೫ ಅಡಿ ಉದ್ದದ ಹುಳು

ನಮ್ಮ ದೇಶದ ಸುಮಾರು 7 ಮಿಲಿಯ ಹಳ್ಳಿಯ ಜನರು, ಒಂದು ವಿಚಿತ್ರ ಹುಳುಬಾಧೆಗೆ ಒಳಗಾಗಿದ್ದಾರೆ. ಗಿನಿ ಹುಳದ ಮೊಟ್ಟೆಯನ್ನು ತಿಂದುಬದುಕುವ ಒಂದು ಜಾತಿಯ ನೊಣಗಳ ಸೋಂಕಿಗೆ ಬಂದ ನೀರನ್ನು ಕುಡಿದರೆ ಈ ಕಾಯಿಲೆ ಅಂಟುತ್ತದೆ. ಈ ಮೊಟ್ಟೆಗಳು ದೇಹದಲ್ಲಿ ಹುಳುಗಳಾಗಿ ಬೆಳೆಯುತ್ತವೆ. ಈ ಹುಳುಗಳ ಉದ್ದ ಸುಮಾರು 4–5 ಅಡಿಗಳು ! ಇವು ಹೆಚ್ಚಾಗಿ ಕಾಲಿನಲ್ಲಿ ಬೆಳೆಯುವುದಾದರೂ, ದೇಹದ ಯಾವ ಭಾಗದಲ್ಲೂ ಬೆಳೆಯಬಲ್ಲವು. ಈ ರೋಗದ ಸೋಂಕು ತಗಲಿತೆಂದರೆ ಯಾವ ಔಷದವೂ ತಾಗುವುದಿಲ್ಲ. ಹಿಂದಿನ ಕಾಲದವರು ಕೊಡುತ್ತಿರುವ ಚಿಕಿತ್ಸೆ ಅಂದರೆ, ಹುಳುವನ್ನು ಒಂದು ಕಡ್ಡಿಗೆ ಸುತ್ತಿ ಸ್ವಲ್ಪ ಸ್ವಲ್ಪವೇ ಪ್ರತಿದಿನ ಹೊರಗೆ ಎಳೆಯುವುದು. ಈ ಕಾಯಿಲೆಯನ್ನು ತಡೆಯುವುದು ಕಷ್ಟವೂ ಅಲ್ಲ ದುಬಾರಿಯೂ ಅಲ್ಲ. ಶುದ್ಧ ನೀರಿನ ಪೂರೈಕೆಯಷ್ಟೇ ಮುಖ್ಯವಾದದ್ದು.

ತುಮಕೂರಿನಲ್ಲಿ ಬರಪೀಡಿತರಿಗೆ ರಾಗಿವಿತರಣೆ

ಜುಲೈ ೧೩ ರಂದು ಬರ ಪರಿಹಾರ ಕಾರ್ಯಕ್ರಮದ ಅಂಗವಾಗಿ ಬೆಂಗಳೂರು ಸಿ. ಐ. ಟಿ. ಯು ಮತ್ತು ತುಮಕೂರು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಂಗ್ರಹಿಸಿದ ನಿಧಿಯಿಂದ ರಾಗಿಯನ್ನು ಕೊಂಡು ಉಚಿತವಾಗಿ ಹಂಚುವ ಕಾರ್ಯಕ್ರಮದಲ್ಲಿ ತುಮಕೂರು ತಾಲ್ಲೂಕು ಹೆಬ್ಬಾಕ ಗ್ರಾಮದಲ್ಲಿ ಗುರುತಿಸಲಾದ ಕಡುಬಡವರಿಗೆ ಹಂಚಲಾಯಿತು,

ಈ ಕಾರ್ಯಕ್ರಮಕ್ಕೆ ಅನಿರೀಕ್ಷಿತವಾಗಿ ಆಗಮಿಸಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದರಾಜ್ಯ ಮಂಡಳಿಯ ಸದಸ್ಯ ಎಸ್. ಕೆ. ಉಪಾಧ್ಯಾಯ ಮಾತನಾಡಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಾಮಾನ್ಯ ರೈತರ ಬಗ್ಗೆ ಯೋಚಿಸುವುದೇ ಇಲ್ಲ ಇವುಗಳ ಧೋರಣೆ ಶ್ರೀಮಂತ ರೈತರ ಪರವಾಗಿದೆ ಎಂದು ಟೀಕಿಸಿದರು. ಇಂದಿನ ರೈತರ ಸಮಸ್ಯೆಗಳು ಬಗೆಹರಿಯ ಬೇಕಾದರೆ ರೈತರಸಂಘಟನೆ ಬಲವಾಗಬೇಕು ಎಂದೂ ತಿಳಿಸಿದರು. ಈ ಸಂಘಟನೆ ಬಲವಾಗದಿರಲೆಂದು ಜಾತಿವಾದವನ್ನು ತಂದು ಸಂಘಟನೆಯನ್ನು ಮುರಿಯುತ್ತಿರುತ್ತಾರೆ ಎಂದರು.

ಬರ ಪರಿಹಾರ ಅಸಮರ್ಪಕ

ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾ ಕಾರ್ಮಿಕ ಮುಖಂಡ ಕೆ. ಆರ್. ನಾಯಕ್ ಮಾತನಾಡುತ್ತಾ, ಈ ಜಿಲ್ಲೆಯಲ್ಲಿ ಸತತವಾಗಿ ನಾಲ್ಕು ವರ್ಷಗಳಿಂದ ಮಳೆಯಾಗದೇ ರೈತರು ಭೀಕರ ಬರಗಾಲಕ್ಕೆ ತುತ್ತಾಗಿದ್ದಾರಲ್ಲದೆಗುಬ್ಬಿ ಪಾವಗಡ, ಕೊರಟಗೆರೆಹಾಗೂ ತುಮಕೂರು ತಾಲ್ಲೂಕುಗಳಲ್ಲಿ ತಾವು ಖುದ್ದಾಗಿ ಕಂಡ ಬರಪರಿಸ್ಥಿತಿಯನ್ನು ವಿವರಿಸಿದರು. ಅಭಾವ ಪರಿಹಾರ ಕಾಮಗಾರಿಗಳು ಸಮರ್ಪಕವಾಗಿಲ್ಲ. ಅವುಗಳು ಹೆಚ್ಚು ದುರುಪಯೋಗದಿಂದ ಕೂಡಿವೆ ಎಂದೂ ಟೀಕಿಸಿದರು. ರಾಜ್ಯ ಸರ್ಕಾರದ ಕಾಮಗಾರಿ ಮಂತ್ರಿಗಳು ಈ ನೀರನ್ನು ತುಮಕೂರು ಜಿಲ್ಲೆಗೆ ತರಲು ವಿನಾಕಾರಣ ತಾರತಮ್ಯವನ್ನುಂಟು ಮಾಡುತ್ತಿದ್ದಾರೆ. ಇದನ್ನು ಅವರ ಪಕ್ಷದ ಶಾಸಕರೇ ಖಂಡಿಸಿದ್ದಾರೆ. ಎಂದು ತಿಳಿಸಿದರು.

ಆಗಸ್ಟ್ 1 ರಂದು ಸಂಘ ಹಾಕಿಕೊಂಡಿರುವ ಬೃಹತ್ ಪ್ರತಿಭಟನಾ ರ್‍ಯಾಲಿಗೆ ತಾವೆಲ್ಲರೂ ಸಹಕರಿಸಬೇಕು ಎಂದು ಕೇಳಿಕೊಂಡರು.

ಜಿಲ್ಲಾ ಸಮಿತಿಯ ಕಾರ್ಯದರ್ಶಿ ಹೆಚ್. ಸಿ. ಚಿನ್ನಪ್ಪ ದೇಶದ ಬೆನ್ನೆಲುಬಿನಂತಿರುವ ಈ ರೈತ ಸಂಘಟನೆ ಬಲವಾಗದೆ ರೈತರ ಸಮಸ್ಯೆಗಳು ಇನ್ನೂ ಬಗೆಹರಿಯದೇ ಹಾಗೆಯೇ ಮುಂದುವರಿಯುತ್ತಿವೆ ಎಂದರು.

ಹೆಬ್ಬಾಕಗ್ರಾಮದ ಮಾಜಿ ಪಂಚಾಯತಿ ಅಧ್ಯಕ್ಷ ಶಿವಲಿಂಗಪ್ಪ ಅಧ್ಯಕ್ಷತೆ ವಹಿಸಿದ್ದರು.,ಊರಿನ ಪ್ರಮುಖಕೆಂಪೇಗೌಡ ಧಾನ್ಯ ವಿತರಣೆ ಮಾಡಿದರು. ಜಿಲ್ಲಾ ಸಮಿತಿ ಅಧ್ಯಕ್ಷ ಟಿ.ಕೆ.ಗೋವಿಂದರಾಜು ಸ್ವಾಗತಿಸಿದರು.

ಊರುಕೆರೆಯಲ್ಲಿ

ನಂತರ ಇದೇ ಕಾರ್ಯಕ್ರಮ ಸಂಜೆ ಊರುಕೆರೆ ಗ್ರಾಮದಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ಊರುಕೆರೆ ಮಾಜಿ ಪಂಚಾಯತಿ ಸದಸ್ಯ ಪಿ. ಲಿಂಗಯ್ಯ ವಹಿಸಿದ್ದರು. ಧಾನ್ಯ ವಿತರಣೆಯನ್ನು ಪುಟ್ಟಲಿಂಗಪ್ಪ ಮಾಡಿದರು.

ತುಪ್ಪದ ಕೋಣ :

ದಿನಾಂಕ 17–7–86 ರಂದು ರಾಗಿ ಹಂಚಿಕೆ ಕಾರ್ಯಕ್ರಮ ನಡೆಯಿತು. ರೈತ ಮುಖಂಡ ಚಿಕ್ಕ ಹೊನ್ನಪ್ಪನವರು ಅಧ್ಯಕ್ಷತೆ ವಹಿಸಿದ್ದರು ಟಿ.ಕೆ. ಗೋವಿಂದರಾಜುರವರು, ಎಚ್. ಸಿ. ಚನ್ನಪ್ಪನವರು ಭಾಗವಹಿಸಿದ್ದರು.

ಆಗಸ್ಟ್ ೮ ರಿಂದ ರಾಷ್ಟ್ರೀಯ ಭಾವೈಕ್ಯ ಸಪ್ತಾಹ

ದೇಶದ ಐಕ್ಯತೆ, ಸಮಗ್ರತೆಗೆ ಗಂಡಾತರ

ದೇಶಾದ್ಯಂತ ತಮ್ಮ ತೀವ್ರ ಚಟುವಟಿಕೆಗಳನ್ನು ಮುಂದುವರಿಸುತ್ತಿರುವ ಛಿದ್ರಕಾರಿ ಶಕ್ತಿಗಳ ಗಂಭೀರ ಸಮಸ್ಯೆಗಳ ಕುರಿತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಜನರ ಹಾಗೂ ರಾಜಕೀಯ ಪಕ್ಷಗಳ ಗಮನ ಸೆಳೆಯುತ್ತ ಬಂದಿದೆ. ಸಾಮ್ರಾಜ್ಯಶಾಹಿಗಳಿಂದ ಅವರಿಗೆ ಸಾಕಷ್ಟು ಹಣ, ಟ್ರೈನಿಂಗ ಮತ್ತು ಶಸ್ತ್ರಾಸ್ತ್ರಗಳು ಒದಗಿಸಲ್ಪಡುತ್ತಿದೆ. ಹಾಗೆಯೇ ನೈತಿಕ ರಾಜಕೀಯ ಬೆಂಬಲವೂ ಲಭ್ಯವಾಗುತ್ತಿದೆ. ನಮ್ಮ ದೇಶದಲ್ಲಿಯೇ ಆಳುವ ಪಕ್ಷವಾದ ಕಾಂಗ್ರೆ ಮತ್ತು ಕೆಲವು ಬಂಡವಳಶಾಹಿ ವಿರೋಧ ಪಕ್ಷಗಳುತಾತ್ಕಾಲಿಕ ಲಾಭದ ಸಲುವಾಗಿ ಅಂಥ ಛಿದ್ರಕಾರಿ ಶಕ್ತಿಗಳನ್ನು ಉಪಯೋಗ ಪಡಿಸಿಕೊಳ್ಳುತ್ತಿವೆ. ಕಾಂಗ್ರೆ ಮತ್ತು ಇತರ ಬಂಡವಾಳಶಾಹಿ ಪಕ್ಷಗಳು ಅಲ್ಪ ಲಾಭಕ್ಕಾಗಿ ಸಂಕುಚಿತ ನಿಲುಮೆ ತಾಳಿ, ಮತೀಯ, ಧರ್ಮೀಯ, ಛಿದ್ರಕಾರಿ ಶಕ್ತಿಗಳುಉಪಯೋಗಮಾಡಿಕೊಳ್ಳುತ್ತಿರುವುದರಿಂದಾಗಿಯೇ ಇಡೀ ದೇಶದಲ್ಲಿ ಭಯೋತ್ಪಾದಕ, ಜಾತೀಯ ಗಲಭೆಗಳು ಮೂಲೆ ಮೂಲೆಗಳಿಗೆಲ್ಲ ಪ್ರಸರಿಸಿ ಐಕ್ಯತೆಗೂದೇಶದಸಾರ್ವಭೌಮತ್ವಕ್ಕೂ ಅಪಾಯಕಾರಿಯಾಗುತ್ತಿದೆ.

ಸಿಪಿಐ (ಎಂ) ಎಚ್ಚರಿಕೆ

ಸಿ ಪಿ ಐ (ಎಂ) ತನ್ನ ರಾಜಕೀಯ ಸಂಘಟನಾತ್ಮಕ ವರದಿಯಲ್ಲಿ ಈ ರೀತಿ ಹೇಳಿದೆ "11ನೇ ಮತ್ತು 12ನೇ ಕಾಂಗ್ರೆಸ್ಸಿನ ಕಾಲಾವಧಿ ಕಷ್ಟಕರವಾಗಿತ್ತು. ಸರಕಾರದ ಜನ ವಿರೋಧಿ ಧೋರಣೆಗಳಿಂದಾಗಿ ಉಂಟಾದ ಅಸಂತುಷ್ಟಿಯನ್ನು ಉಪಯೋಗಿಸಿಕೊಂಡು ಛಿದ್ರಕಾರಿ, ಜಾತೀಯವಾದಿ, ಪ್ರತ್ಯೇಕತಾವಾದಿ ಶಕ್ತಿಗಳು ಬೇರೆ ಬೇರೆ ರೂಪದಲ್ಲಿ ಸಾಮ್ರಾಜ್ಯಶಾಹಿಗಳ ಬೆಂಬಲದಿಂದ ತಮ್ಮ ಚಟುವಟಿಕೆಗಳನ್ನು ಚುರುಕುಗೊಳಿಸಿದವು. ಪಂಜಾಬಿನಲ್ಲಿ ಅವು ಪ್ರತ್ಯೇಕ ಖಲಿಸ್ತಾನದ ರೂಪತಾಳಿದವು. ಅಸ್ಸಾಂದಲ್ಲಿ ಅದು ವಿದೇಶೀಯರ ವಿರುದ್ಧ ಚಳುವಳಿಯಾಗಿ ಬೆಳೆಯಿತು. ಬಿಹಾರಿನಲ್ಲಿ ಜಾತೀಯ ಭಿನ್ನಾಭಿಪ್ರಾಯ ತೀವ್ರ ಸ್ವರೂಪ ತಾಳಿತು. ಗುಜರಾತಿನಲ್ಲಿ ಆಳುವ ಕಾಂಗ್ರೆಸ್ ಪ್ರಕಟಿಸಿದ ಮೀಸಲಾತಿ ನೀತಿ ದುಡಿಯುವ ವರ್ಗವನ್ನು ವಿಭಜಿಸಿ ಒಬ್ಬರನ್ನೊಬ್ಬರು ಕೊಲ್ಲುವಂತೆ ಮಾಡಿತು. ದಲಿತ ವರ್ಗದಲ್ಲಿ ಬಹುಜನ ಸಮಾಜ ಪಾರ್ಟಿ (ಡಿ. ಎಸ್.) ಎಂಬ ಹೊಸಪಕ್ಷ ಹುಟ್ಟಿಕೊಂಡು ವರ್ಗ ಸಂಘಟನೆಗೆ ವಿರುದ್ಧವಾಗಿ ದಲಿತರನ್ನು ಜಾತೀಯ ನೆಲೆಗಟ್ಟಿನಲ್ಲಿ ಸಂಘಟಿಸಲು ಪ್ರಾರಂಭಿಸಿತು. ಗುಡ್ಡಗಾಡು ಜನರ ಮಧ್ಯೆ ಕ್ರಿಶ್ಚನ್ ಮಿಶಿನರಿಗಳು ತ್ವರಿತಗತಿಯಿಂದ ತಮ್ಮ ಚಟುವಟಿಕೆ ಮುಂದುವರಿಸಿದರು. ಮುಸ್ಲಿಂ ಮತ್ತು ಹಿಂದೂ ಪಂಥವಾದಿಗಳು ತಮ್ಮ ಜಾತಿಯವರನ್ನು ಸಂಘಟಿಸಲುಮುಂದಾದರು. ಸಾರ್ವತ್ರಿಕವಾಗಿ ಬೆಳೆದು ಬರುತ್ತಿರುವ ಅಸಮಾಧಾನವನ್ನುಛಿದ್ರಕಾರಿ ದಾರಿಯತ್ತ ಒಯ್ಯುವ ಉದ್ದೇಶದಿಂದಲೇ ಈ ಚಟುವಟಿಕೆಗಳೆಲ್ಲ ನಡೆದವು. ಬೆಳೆಯುತ್ತಿರುವ ಪ್ರಜಾಪ್ರಭುತ್ವ ಚಳುವಳಿಯನ್ನು ಅದರಲ್ಲೂ ಮುಖ್ಯವಾಗಿ ರೈತರ ಚಳುವಳಿಯನ್ನು ಛಿದ್ರಗೊಳಿಸುವುದೇ ಅದರ ಗುರಿಯಾಗಿತ್ತು. ಪಂಜಾಬ, ಅಸ್ಸಾಂ, ಮಹಾರಾಷ್ಟ್ರ, ಗುಜರಾತ ಪಕ್ಷಗಳ ಘಟಕಗಳು ಜೀವಕ್ಕುಂಟಾಗಬಹುದಾದ ಅಪಾಯವನ್ನು ಲೆಕ್ಕಿಸದೆ ಭಯೋತ್ಪಾದಕ ಚಟುವಟಿಕೆಗಳ ವಿರುದ್ಧ ಜಾತೀಯ ದಂಗೆಗಳ ವಿರುದ್ಧ, ಮೀಸಲಾತಿ ಪರ ವಿರೋಧ ಚಟುವಟಿಕೆಗಳಿಂದಾಗಿ ಕಾರ್ಮಿಕ ವರ್ಗ ಇಬ್ಭಾಗವಾಗುವುದನ್ನು ತಪ್ಪಿಸಲು ಸತತ ಹೋರಾಡಿವೆ, ಅಂಥ ಹೋರಾಟದಲ್ಲಿ ಪಕ್ಷದ ಹಲವಾರು ಕಾರ್ಯಕರ್ತರು ತಮ್ಮ ಜೀವ ಬಲಿ ಕೊಡಬೇಕಾಗಿ ಬಂದಿದೆ".

ರಾಷ್ಟ್ರೀಯ ಭಾವೈಕ್ಯ ಕಮಿಟಿಗೆ ಮನವಿ

ಕಾಂಗ್ರೆ ಸರಕಾರದ ಜನವಿರೋಧಿಯಾದ ಆರ್ಥಿಕ – ರಾಜಕೀಯ – ಸಾಮಾಜಿಕ ನೀತಿಯಿಂದಾಗಿ ದೇಶಾದ್ಯಂತ ಹಬ್ಬುತ್ತಿರುವ ಧರ್ಮೀಯ, ಛಿದ್ರಕಾರಿ ಭಯೋತ್ಪಾದಕ ಚಟುವಟಿಕೆಗಳನ್ನು ಹತೋಟಿಗೆ ಒಳಪಡಿಸಲು ವಿಫಲಗೊಂಡ ರಾಜೀವ್ ಸರಕಾರ ಇದೇ ವರ್ಷ ಏಪ್ರಿಲ್ 7 ರಂದು ಪುನರ್ಘಟಿತ ರಾಷ್ಟ್ರೀಯ ಭಾವೈಕ್ಯ ಸಮಿತಿಯ ಸಭೆ ಕರೆದಿದ್ದರು. ಆ ಸಮಿತಿಗೆ ಸಿಪಿಐ(ಎಂ) ಸಲ್ಲಿಸಿದ ಮನವಿಯಲ್ಲಿ "ಯಾವ ಪರಿಸ್ಥಿತಿಯಲ್ಲಿ ಈ ಸಮಿತಿ ಸಭೆ ಕರೆಯಲಾಗಿದೆಂಬುದನ್ನು ನೋಡಿ ಯಾವ ದೇಶಾಭಿಮಾನಿಗಾದರೂ ಚಿಂತೆಯಾಗದಿರಲಾರದು. ಪಂಜಾಬ ಬೆಂಕಿಯಿಂದ ಉರಿಯುತ್ತಿದೆ. ಕಾಶ್ಮಿರದಲ್ಲಿ ಪ್ರತ್ಯೇಕತಾವಾದಿಗಳ ಹಾಗೂ ಅಭದ್ರಗೊಳಿಸುವ ಶಕ್ತಿಗಳ ಚಟುವಟಿಕೆ ವಿಸ್ತಾರವಾಗುತ್ತಿದೆ. ನೆರೆಕರೆಯ ಪಾಕಿಸ್ತಾನದ ಭೂಮಿ ಭಯೋತ್ಪಾದಕರ ಟ್ರೈನಿಂಗ ಕೇಂದ್ರವಾಗಿದೆ. ಈಶಾನ್ಯ ಭಾಗ ವಿದೇಶೀಯರ ಉದಾರ ಸಹಾಯದಿಂದ ಹೇಳಲಾರದಷ್ಟು ಅಸ್ಥಿರವಾಗಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಗಳು ಅವುಗಳಿಗೆಲ್ಲ ಸಹಾಯಮಾಡುತ್ತಿವೆಂಬುದಕ್ಕೆ ಕೇಂದ್ರ ಸರಕಾರದ ಹತ್ತಿರ ಸಾಕಷ್ಟು ಪುರಾವೆಗಳಾಗಿವೆ. ಆಡಳಿತೆಯಲ್ಲಿ ಅವು ಆಳವಾಗಿ ಸೇರಿಕೊಂಡಿವೆ. ಸ್ವಾತಂತ್ರ್ಯ ಪಡೆಯುವ ಪೂರ್ವದಲ್ಲಿ ಮತ್ತು ಅನಂತರಕೂಡ ದೇಶ ಈಗಿನಷ್ಟುಗಂಡಾಂತರ ಪರಿಸ್ಥಿತಿಯನ್ನೆದುರಿಸಿಲ್ಲ" ಎಂದು ಎಚ್ಚರಿಸಿತ್ತು.

ಹಿಂದಿನ ಅಂಥ ಕಮಿಟಿಗಳ ಕಾರ್ಯದ ವಿಫಲತೆಯನ್ನು ಅರಿತು ಸಿಪಿಐ (ಎಂ) ಪಕ್ಷ ಈಗ ಆಳುತ್ತಿರುವ ಹಾಗೆಯೇ ಆ ಕಮಿಟಿಯಲ್ಲಿ ಸದಸ್ಯರಾಗಿರುವ ರಾಜಕೀಯ ಪಕ್ಷಗಳು ದೇಶವನ್ನೆದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದರಲ್ಲಿ ಯಶಸ್ವಿಯಾಗಬಲ್ಲವೇ ಎಂಬ ಸವಾಲನ್ನು ಹಾಕಿತ್ತು ಮನವಿಯಲ್ಲಿ.

—ಎನ್. ಕೆ. ಉಪಾಧ್ಯಾಯ

ಸಿಪಿಐ(ಎಂ) ಪ್ರಧಾನಕಾರ್ಯದರ್ಶಿ ಇ.ಎಂ.ಎಸ್. ನಂಬೂದಿರಿಪಾದ ಅವರು ರಾಷ್ಟ್ರೀಯ ಸಮಗ್ರತಾ ಸಮಿತಿಯಲ್ಲಿ ಭಾಷಣ ಮಾಡುತ್ತಾ "ವಿದೇಶಗಳಿಂದ ಹಣ ಪಡೆದ ಬಲವಾದ ಶಕ್ತಿಗಳು ಕಾರ್ಯಗತವಾಗಿವೆ. ಅವು ಧರ್ಮ ಪ್ರಸಾರಕರಾಗಿ, ಶಿಕ್ಷಣ ಸಂಸ್ಥೆಗಳಲ್ಲಿ ಸ್ವಯಂಸೇವಾ ಸಂಸ್ಥೆಗಳಾಗಿ ಕೆಲಸ ಮಾಡುತ್ತಿದ್ದಾರೆ. ಅವರೆಲ್ಲರ ಧ್ಯೇಯ ಒಂದೇ. ದೇಶದ ಸಮಗ್ರತೆಯನ್ನು ನುಚ್ಚುನೂರು ಮಾಡುವುದಾಗಿದೆ" ಎಂದು ಎಚ್ಚರಿಸಿ "1961ರಲ್ಲಿಪ್ರಥಮ ಕಮಿಟಿ ಸಭೆಯಲ್ಲಿಯೇ ನಮ್ಮ ಪಕ್ಷ ರಾಷ್ಟ್ರದ ಐಕ್ಯತೆ ಮತ್ತು ಸಾರ್ವಭೌಮತ್ವವನ್ನು ರಕ್ಷಿಸುವ ಪಣ ತೊಟ್ಟಿತ್ತು. ಆದರೆ ಹಿಂದಿನ ಕಮಿಟಿಗಳ ನಿರ್ಣಯಗಳು ಜ್ಯಾರಿಯಾಗಿರಲಿಲ್ಲ. ರಾಷ್ಟ್ರೀಯ ಐಕ್ಯತೆ ಕಾಪಾಡುವುದರಲ್ಲಿ ಈ ಕಮಿಟಿಯಾದರೂ ಯಶಸ್ವಿಯಾದೀತೆಂದು ಆಶಿಸುತ್ತೇನೆ" ಎಂದು ಹೇಳಿದ್ದರು.

ರಾಷ್ಟ್ರೀಯ ಭಾವೈಕ್ಯ ಸಮಿತಿಗೆ ಸಲ್ಲಿಸಿದ ಮನವಿಯಲ್ಲಿ ಸಿ ಪಿ ಐ (ಎಂ) ಹಲವಾರು ಸೂಚನೆಗಳನ್ನು ಮಂಡಿಸಿತ್ತು. ಪಂಜಾಬಿನಲ್ಲಿ ಭಯೋತ್ಪಾದಕರ ವಿರುದ್ಧ ಉಗ್ರಕ್ರಮ, ಪಂಜಾಬ ಒಪ್ಪಂದವನ್ನು ಕೂಡಲೇ ಜ್ಯಾರಿಯಲ್ಲಿ ತರುವುದು, ಕಾಶ್ಮೀರದಲ್ಲಿ ಚುನಾಯಿತ ಸರಕಾರ ಅಧಿಕಾರ ಚಲಾಯಿಸುವಂತೆ ಮಾಡುವುದು, ತ್ರಿಪುರಾದಲ್ಲಿ ಪ್ರತ್ಯೇಕತಾವಾದಿ ತ್ರಿಪುರ ಉಪಜಾತಿ ಸಮಿತಿಯಂಥವರ ಸಂಬಂಧ ಬಿಟ್ಟುಕೊಟ್ಟು ಎಡರಂಗ ಸರಕಾರವನ್ನು ಉರುಳಿಸುವ ಆಶೆ ಬಿಟ್ಟು ಬಿಡುವುದು, ಅಸ್ಸಾಂಗಣ ಪರಿಶತ್ ಮತ್ತು ಕಾಂಗ್ರೆಸು ಅಸ್ಸಾಂ ಸಮಸ್ಯೆಯನ್ನು ತೀವ್ರ ಪರಿಹರಿಸುವುದು ಕೇಂದ್ರ–ರಾಜ್ಯ ಸಂಬಂಧಗಳನ್ನು ಸುಧಾರಿಸುವುದು, ಶಿಕ್ಷಣ ನೀತಿಯನ್ನು ಬದಲಾಯಿಸುವುದು ಮುಂತಾದವು.

ಕೇಂದ್ರ ಸರಕಾರದ ವೈಫಲ್ಯ

ಆದರೆ ಏಪ್ರಿಲ್ ತಿಂಗಳಿಂದ ಇತ್ತೀಚಿಗಿನ ಘಟನೆಗಳು, ಕೇಂದ್ರ ಸರಕಾರದ ವರ್ತನೆ ಛಿದ್ರಕಾರಿಗಳಿಗೆ ಭಯೋತ್ಪಾದಕರಿಗೆ, ವಿಭಜನಕಾರಿಗಳಿಗೆಲ್ಲ ಪ್ರೋತ್ಸಾಹಮುಂದುವರಿಸುವುದಾಗಿದೆ. ಪಂಜಾಬ ಒಪ್ಪಂದವನ್ನು ಜ್ಯಾರಿ ಮಾಡುವುದರಲ್ಲಿ ಕೇಂದ್ರ ಸರಕಾರ ಸಂಪೂರ್ಣ ವಿಫಲಗೊಂಡಿದೆ ಕಮಿಶನುಗಳ ಮೇಲೆ ಕಮಿಶನುಗಳನ್ನು ನೇಮಿಸಿ ಪಾಕಿಸ್ತಾನ ಭಯೋತ್ಪಾದಕರಿಗೆ ಟ್ರೈನಿಂಗ್ ಕೊಡುತ್ತಿದೆಂದು ಬಹಿರಂಗವಾಗಿ ಹೇಳುತ್ತ, ಅದರ ಕುರಿತು ಕಠಿಣಕ್ರಮತೆಗೆದುಕೊಳ್ಳದೆ. ಪಂಜಾಬ ಒಪ್ಪಂದ ಜ್ಯಾರಿಗೆ ಆತಂಕ ಒಡ್ಡುತ್ತಿರುವ ಹರಿಯಾಣ ಮುಖ್ಯಮಂತ್ರಿಯನ್ನು ಹತೋಟಿಗೆ ತಾರದೆ ಪಂಜಾಬ ಸಮಸ್ಯೆ ಮತ್ತಷ್ಟು ಹದಗೆಡುವಂತೆ ಮಾಡಿದೆ. ಕಳೆದ ಹಲವಾರು ವರ್ಷಗಳಿಂದ ಪ್ರತ್ಯೇಕ ಸಶಸ್ತ್ರ ಸೈನ್ಯ ರಚಿಸಿ ಕೊಲೆ–ಸುಲಿಗೆಗೆ ಕಾರಣೀಭೂತನಾದ ಲಾಲ್‌ಡೆಂಗಾನ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡು, ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾಯಿತ ಮುಖ್ಯಮಂತ್ರಿಯ ಬದಲಾಗಿ, ಮಿಜೋರಾಂನಲ್ಲಿ ಲಾಲ್‌ಡೆಂಗಾನನ್ನು ಮುಖ್ಯಮಂತ್ರಿಯಾಗಿ ಮಾಡುತ್ತೇನೆಂದು ಒಪ್ಪಿರುವುದು, ಆ ಮನುಷ್ಯ ವಿಶಾಲ ಮಿಜೋರಾಂ ರಚನೆಯಾಗಬೇಕೆಂದು ಹೇಳುತ್ತಿರುವುದು ಈಶಾನ್ಯ ಭಾಗವನ್ನು ಮತ್ತಷ್ಟು ಅಸ್ಥಿರಗೊಳಿಸುವಂತಾಗಿದೆ. ಯಾವ ಜಾತೀಯ, ಭಾಷಿಕ, ಸಂಕುಚಿತ ಭಾವನೆಗಳಿಗೆ ಅವಕಾಶ ಮಾಡಿಕೊಡದೆ, ಸಮಗ್ರತೆ ಸೌಹಾರ್ದತೆಯನ್ನು ಉಳಿಸಿಕೊಂಡು ಬಂದಿದ್ದ ಪಶ್ಚಿಮ ಬಂಗಾಲದ ದಾರ್ಜಿಲಿಂಗ ಜಿಲ್ಲೆಯನ್ನು ಪ್ರತ್ಯೇಕಿಸಿ ಗುರ್ಖಾಲ್ಯಾಂಡ ರಚಿಸಬೇಕೆಂದು ಸುಭಾಷ್ ಗೀಸಿಂಗ ಎಂಬವನ ನೇತೃತ್ವದಲ್ಲಿಗುರ್ಖಾ ರಾಷ್ಟ್ರೀಯ ವಿಮೋಚನಾರಂಗದ ಕೈಯ್ಯಲ್ಲಿ ಖುಖೂರಿಸ್ (ಹರಿತವಾದ ಆಯುಧ) ಹಿಡಿದುಕೊಂಡು ನಡೆಸುತ್ತಿರುವ ಚಳುವಳಿಯನ್ನು ಎಡರಂಗ ಸರಕಾರ ಸಮರ್ಪಕವಾಗಿ ಎದುರಿಸುತ್ತಿರುವಾಗ, ಕಾಂಗ್ರೆ ಪಕ್ಷ ಪ್ರತ್ಯೇಕ ಗೂರ್ಖಾ ರಾಜ್ಯ ಚಳುವಳಿಗೆ ಬೆಂಬಲ ನೀಡಿ, ಅದರಲ್ಲಿ ಭಾಗವಹಿಸಿ ದೇಶದ ಸಮಗ್ರತೆಯ ಹೆಸರಿಗೆ ಕಳಂಕಉಂಟುಮಾಡಿ ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸುತ್ತಿದೆ. ಅಸ್ಸಾಂ ಸಮಸ್ಯೆ ಬಗೆಹರಿಯದೆ ಮತ್ತೆ ಚಳುವಳಿಯ ಭೀತಿ ಉಂಟಾಗಿದೆ ತ್ರಿಪುರದಲ್ಲಿ ಡಿ.ಯು. ಜೆ.ಎಸ್‌ನಂಥ ಛಿದ್ರಕಾರಿಗಳೊಡನೆಯ ಸಂಬಂಧವನ್ನು ಕಾಂಗ್ರೆ ಬಿಟ್ಟುಕೊಟ್ಟಿಲ್ಲ ನಿರಾಶ್ರಿತರ ಒಳನುಗ್ಗುವಿಕೆಗೆ ಪರಿಹಾರ ಒದಗಿಸುತ್ತಿಲ್ಲ ಕೇರಳದಲ್ಲಿ ಜಾತೀಯ ಪಕ್ಷಗಳೊಡನೆಯ ನಂಟಸ್ತನ ಬಿಟ್ಟಿಲ್ಲ. ಗುಜರಾತಿನಲ್ಲಿ ದಿನಾಲೂ, ನಿರಪರಾಧಿಗಳ ಹತ್ಯೆ ಮುಂದುವರೆದಿದೆ, ಬಿಹಾರ ಉತ್ತರಪ್ರದೇಶಗಳಲ್ಲಿ ಭೂಮಾಲಕರು ದಲಿತರು, ಕೃಷಿಕಾರ್ಮಿಕರು, ಗುಡ್ಡಗಾಡು ಜನರ ಮೇಲೆ ಅತ್ಯಾಚಾರ ಗುಂಡಾಗಿರಿ ನಿರ್ಭಯದಿಂದ ಮುಂದುವರಿಸಿದ್ದಾರೆ. ಕಾಂಗ್ರೆ ಬೆಂಬಲದ ಎನ್. ಟಿ, ಆರ್ ಸರಕಾರದಲ್ಲಿಯೂ ರಾಕ್ಷಸೀ ರೂಪದ ಅತ್ಯಾಚಾರ ದಲಿತರ ಮೇಲೆ ಮುಂದುವರಿದಿದೆ.

ಎಲ್ಲೆಡೆ ಜಾತೀಯ ದಂಗೆಗಳು, ಕ್ಷುಲ್ಲಕ ಭಾಷೆ ಚಳುವಳಿಗಳು ನಡೆಯುತ್ತಿವೆ.

ಕರ್ನಾಟಕದಲ್ಲಿ

ಕರ್ನಾಟಕದಲ್ಲಿ ರಾಜಕುಮಾರ ಹಿತೈಷಿ. ದಲಿತರ ಸಂಘ, ಹಿಂದುಳಿದವರ ಸಂಘಗಳ ಹೆಸರಿನಲ್ಲಿ ಸಂಘಟಿತ ಕಾರ್ಮಿಕರಲ್ಲಿ ಒಡಕುಂಟು ಮಾಡುವ ಪ್ರಯತ್ನ ನಡೆದಿದೆ. ಇತ್ತೀಚಿಗೆ ಕೆ. ಇ. ಬಿ. ಯಲ್ಲೊಂದು ದಲಿತ ಸಂಘ ಹುಟ್ಟಿಕೊಂಡಿದೆ. ಅದಕ್ಕೆ ವಿದೇಶೀಯರ ಬೆಂಬಲವಿದೆ, ಧಾರಾಳವಾಗಿ ಹಣದ ಸಹಾಯ ಒದಗಿಸಲಾಗುತ್ತಿದೆಂದು ಕೇಳಿಬರುತ್ತಿದೆ.

ರಾಯಚೂರ, ಕೋಲಾರ ಮೊದಲಾದ ಜಿಲ್ಲೆಗಳಲ್ಲಿ ಕ್ರಿಶ್ಚನ್ ಮಿಶಿನರಿಗಳು, ಸಿ.ಐ.ಎ ಏಜಂಟರೆಲ್ಲ ಗುಡ್ಡಗಾಡುಜನರ, ಹಿಂದುಳಿದವರ, ದಲಿತರ ಮಧ್ಯೆ ಶಿಕ್ಷಣ, ಮಹಿಳೆಯರ ಸಂಘಟನೆ ಆರೋಗ್ಯ ಸೇವೆಯ ಹೆಸರಿನಲ್ಲಿ "ಕಲ್ಯಾಣ" ಕಾರ್ಯಗಳಲ್ಲಿ ತೊಡಗಿರುವುದು ವಿಶೇಷ ಆಕರ್ಷಣೆಯಾಗಿದೆ. ರಾಯಚೂರಿನಲ್ಲಿ ನಮ್ಮ ಪಕ್ಷ ಅವರನ್ನು ಧೈರ್ಯದಿಂದ ಎದುರಿಸುತ್ತಿದ್ದಾರೆ. ರಾಜ್ಯದ ಹಲವಾರು ಕಡೆಗಳಲ್ಲಿ ಕೇಂದ್ರ–ರಾಜ್ಯ ಸರಕಾರಗಳ "ಆಶೀರ್ವಾದ"ದಿಂದಲೇ "ಸ್ವಯಂಸೇವಕ" ಸಂಘಟನೆಗಳು (ವಾಲೆಂಟರಿ ಆರ್ಗನೈಸೇಶನ್ಸ) ಬಹಳಷ್ಟು ಚಟುವಟಿಕೆಗಳಲ್ಲಿ ತೊಡಗಿವೆ.

(ಐದನೆಯ ಪುಟ ನೋಡಿ)

ಇನ್ನು ಮುಂದೆ ಎಂದೆಂದೂ

ಹಿರೋಷಿಮಾಗಳು ಬೇಡ! ಬೇಡ!!

—ಜಿ. ಎನ್. ಮೋಹನ್

ಈ ಮಣ್ಣಿನಲ್ಲಿ, ಈ ಜಗತ್ತಿನಲ್ಲಿ ಮುಂದೆ ಎಂದೆಂದೂ ಹಿರೋಷಿಮಾ ಬೇಡ ! ಬೇಡ!! ಇಂದು ಜಗತ್ತಿನಲ್ಲಿ ಬರಿಯ ಒಂದು ಪಟ್ಟಣವನ್ನು ಮಾತ್ರವೇ ಅಲ್ಲ. ಇಡೀ ಯುರೋಪನ್ನು ಯುರೋಷಿಮಾ ಮಾಡುವಷ್ಟು, ಇಡೀ ಜಗತ್ತನ್ನೇ ಒಂದು ನಾಗಸಾಕಿಯನ್ನಾಗಿ ಮಾಡುವಷ್ಟು ಅಣ್ವಸ್ತ್ರಗಳ ಕಣಜವೇ ಇದೆ.

ಅಮೇರಿಕನ್ ರಕ್ತಪಿಪಾಸುಗಳ, ಅವರ ಜೊತೆಯ ಬ್ರಿಟನ್, ಜಪಾನ್‌ಗಳ ನರಭಕ್ಷಕರ ವಿರುದ್ಧ ಹಿರೋಷಿಮಾ ಇಲ್ಲವಾದ ಆಗಸ್ಟ್ ಆರರಂದು ದನಿಯೆತ್ತಬೇಕಾಗಿದೆ. ನಮಗೆ ಯುದ್ಧ ಬೇಡ ! ನಮಗೆ ಬಾಂಬು ಬೇಡ! ಅನ್ನ ಬೇಕು! ಜೀವನ ಬೇಕು ! ಎಂದು.

ಆಗಸ್ಟ್ 6, 1945
ಹಿರೋಷಿಮಾ
8 ಗಂಟೆ 15 ನಿಮಿಷ,

ಬಾನಂಗಳದಲ್ಲಿ ಮೂರು ಚುಕ್ಕೆಗಳು ಅತ್ತಿಂದಿತ್ತ ಸರಿದಾಡತೊಡಗಿದವು. ಸ್ವಲ್ಪ ಹೊತ್ತಿಗೆ ಆ ಚುಕ್ಕೆಯ ಜೊತೆಗೆ ಶಬ್ದವೂ ಕೂಡಿಕೊಂಡಿತ್ತು. ಚಿಕ್ಕೆಗಳು ಬರಬರುತ್ತಾ ದೊಡ್ಡದಾಗುತ್ತಾ ಹೋಯಿತು ಅವು ಚುಕ್ಕೆಗಳಲ್ಲ. ಬೃಹತ್ ವಿಮಾನಗಳು ಆಕಾಶದಲ್ಲಿ ನೋಡುವವರ ಕಣ್ಣುಗಳು ಪುನಃ ಮುಚ್ಚದಂತೆ ಮನೋಹರ ನೃತ್ಯ. ಅತ್ತಿಂದಿತ್ತ ಇತ್ತಿಂತ ದತ್ತ ಹಾರಾಡುತ್ತಿದ್ದ ವಿಮಾನಗಳಿಂದ ಒಂದೊಂದೇ ಕೆಳಗಿಳಿದ ಪ್ಯಾರಾಚೂಟ್‌ಗಳು. ಬೀದಿಗಳಮೇಲೆಲ್ಲಾ ಆಕಾಶದಲ್ಲಿ ನಡೆಯುತ್ತಿದ್ದುದನ್ನು ನೋಡಲು ಜನರ ದಂಡೋದಂಡು. ಗಗನದಲ್ಲಿ ನಡೆಯುತ್ತಿದ್ದ ಕುಣಿತಕ್ಕೆ ಕಣ್ಣು ನೆಟ್ಟುಕೂತರು.

ಕೆಲವು ಸೆಕೆಂಡುಗಳು ಅಷ್ಟೆ.

ನಂತರ ಹಿರೋಷಿಮಾದ ಮೇಲೆ ಆಕಾಶವೇ ಇಲ್ಲವಾಯಿತು. ಮೇಲಿನಿಂದ ನೋಡಿದವರಿಗೆ ಹಿರೋಷಿಮಾವೇ ಇಲ್ಲವಾಯಿತು. ಕೆಲವು ಕ್ಷಣಗಳ ನಂತರ ವಿಮಾನಗಳು ಪುನಃ ಹಾರಾಡಲಾರಂಭಿಸಿದವು "ನಾವು ಗೆದ್ದಿದ್ದೇವೆ" ನಮ್ಮ ಕೈವಶರಾಗಿ" ವಿಮಾನಗಳಿಂದ ಕರಪತ್ರಗಳ ಸುರಿಮಳೆ. ಆಕಾಶದಿಂದ ಕೆಳಗೆ ಜೀಕುತ್ತಾ ದಾರ ಕತ್ತರಿಸಿದ ಗಾಳಿಪಟದಂತೆ ಕೆಳಗಿಳಿದು ಬರುತ್ತಿದ್ದ ಕರಪತ್ರಗಳನ್ನು ಹಿಡಿಯಲು ಹಲವರಿಗೆ ಕೈಗಳೇ ಇರಲಿಲ್ಲ. ಓಡಲು ಜೀವಂತ ಕಾಲುಗಳಿರಲಿಲ್ಲ, ಜೀವವಿದ್ದವರಿಗೆ ಓದಲು ಕಣ್ಣುಗಳಿರಲಿಲ್ಲ. ಕಣ್ಣು ಮಿಟುಕಿಸುವುದರೊಳಗೆ ಹಿರೋಷಿಮಾದ ಒಡಲಲ್ಲಿ ಜೀವವೇ ಇರಲಿಲ್ಲ. "ಕೈವಶರಾಗಿ" ಕರಪತ್ರಕ್ಕೆ ಅರ್ಥವೇ ಇರಲಿಲ್ಲ.

o o o

ಆಗಸ್ಟ್ 9, 1945
ನಾಗಾಸಾಕಿ, 11.02 ನಿಮಿಷ
ಪುನಃ ಅದೇ ದೃಶ್ಯ, ಅದೇ ಕುಣಿತ.

ಒಂದು ಬಾಂಬು, ಹಲವಾರು ಜೀವ ಇಡೀ ಮಾನವ ಕುಲವನ್ನೇ ಕಿತ್ತು ತಿನ್ನುವ, ಕ್ಷಣ ಮಾತ್ರದಲ್ಲಿ ಸ್ಥಬ್ದಗೊಳಿಸುವ ನೂಕ್ಲಿಯಾರ್ ರಾಕ್ಷಸನ ಜನನವಾಗಿತ್ತು. ಜೀವರಾಶಿಗಳ ಮೇಲೆ ಪ್ರತಿದಿನವೂ ಪ್ರತಿಕ್ಷಣವೂ ಸಾವಿನ ಕುಣಿತ ನೇತಾಡುವಂತೆ ಅಮೇರಿಕಾ ಸಜ್ಜಾಗಲಾರಂಭಿಸಿತ್ತು.

ಉತ್ತರ ಫೆಸಿಪಿಕ್ ಸಾಗರದ ಮೆರಿಯಾನಾಸನ್ ಟೀನಿಯನ್ ದ್ವೀಪದಿಂದ 12.5 ಕಿಲೋಟನ್ ಟ್ರೈನೈಟ್ರೋ ಟಾಲಿನ್ (ಟಿ ಎನ್.ಟಿ) ಸಾಮರ್ಥ್ಯವುಳ್ಳ ಬಾಂಬನ್ನು ಹಿರೋಷಿಮಾದ ಮೇಲೂ 22 ಕಿಲೋಟನ್‌ಗಳಷ್ಟು ಟಿ ಎನ್. ಟಿ ಯನ್ನು ನಾಗಾಸಾಕಿಯ ಮೇಲೂ ಸಿಡಿಸಲಾಯಿತು. ಈ ಸಿಡಿತದಿಂದ ಉಂಟಾದ ಬಿಸಿ ಮತ್ತು ಅಣು ಕಿರಣಗಳು ಜೀವರಾಶಿಗಳ ಚರ್ಮಗಳನ್ನು ಜೀವಗಳನ್ನು ಸುಡುತ್ತಾ, ಬೆಂಕಿ ಉಗುಳುತ್ತಾ ಆಕಾಶದಲ್ಲಿ ಬೃಹದಾಕಾರದ ಮೋಡಗಳನ್ನು ಹೊಗೆದೂಳುಗಳನ್ನು ಸೃಷ್ಟಿಸುತ್ತಾ ಹೋಯಿತು. ಹಿರೋಷಿಮಾದಲ್ಲೇನಿದೆ ? ಎಂದು ತಿಳಿಯಲು ಹಲವು ದಿನಗಳೇ ಬೇಕಾಯಿತು, ಇಡೀ ಹಿರೋಷಿಮಾವೇ ಮುಚ್ಚಿಹೋಗಿತ್ತು. ಹಿರೋಷಿಮಾದ 1020 ಮೈಲಿ ಮತ್ತು ನಾಗಸಾಕಿಯ 1200 ಮೈಲಿಗಳಷ್ಟು ಸುತ್ತಳತೆಯಲ್ಲಿ ಜೀವರಾಶಿಗಳನ್ನು ಬಾಂಬುಗಳು ತಿಂದು ಹಾಕಿದ್ದವು.



ಮೈಗಳು ಬೆಂದು ಕರುಕಾಗಿದ್ದವು. ಕಣ್ಣಾಲಿಗಳಲ್ಲಿ ಕಣ್ಣುಗಳೇ ಇರಲಿಲ್ಲ, ಬೀದಿಯಲ್ಲಿ ಬರೀ ಬೆಂದ ಜೀವಗಳು. ಮನೆ ಕಟ್ಟಡಗಳು ನೆಲಕಚ್ಚಿದ್ದವು. ನೆಂಟರನ್ನು ಗೆಳೆಯರನ್ನು ಕರೆತಂಬೆಕಾಗಿದ್ದ ರೈಲ್ವೆಹಳಿಗಳು ನಿಶಬ್ದವಾಗಿದ್ದವು. ಈ ಎಲ್ಲದರ ಮಧ್ಯೆ ಜೀವರಾಶಿಯನ್ನು ಉಳಿಸಲು ಟಿಂಕ್ಚರ್, ಡಿಯೋಟಿನಗಳನ್ನು ಬಿಟ್ಟರೆ ಬೇರೇನೂ ಇರಲಿಲ್ಲ ಯುದ್ಧದ ವಿರುದ್ಧ ಮಾತನಾಡಲು ಬಾಯಿಗಳೂ ಇರಲಿಲ್ಲ.

40 ವರ್ಷಗಳ ನಂತರ

1945

ಹಿರೋಷಿಮಾ ನಾಗಸಾಕಿಯ ಮೇಲೆ ಅಮೇರಿಕಾ ತನ್ನ ಕೆಂಗಣ್ಣು ಕಾರಿದ ಕೊನೆಯ ತಿಂಗಳುಗಳಲ್ಲಿ 3 ಲಕ್ಷ ಜನರು ಕೊನೆಯುಸಿರೆಳೆದಿದ್ದರು. 1 ಲಕ್ಷ 40 ಸಾವಿರ ಹಿರೋಷಿಮಾದಲ್ಲಿ 60 ಸಾವಿರ ನಾಗಸಾಕಿಯಲ್ಲಿ.

1950

ಘಟನೆಗಳ ಐದು ವರ್ಷದ ತರುವಾಯ ಲೆಕ್ಕ ಮೂರು ಲಕ್ಷ ಮುಟ್ಟಿತ್ತು. ಅಣುವಿಕಿರಣದ ಸಮಯದ ಹಲವು ವರ್ಷಗಳ ನಂತರವೂ ವಿಕೀರಣದ ಹಲವು ಖಾಯಿಲೆಗಳು ತಲೆದೋರಿತ್ತು. ಹಲವರು ತಲೆಕೂದಲು ಕಳೆದುಕೊಂಡರು, ಕೆಲವರಿಗೆ ಮೈಮೇಲೆಲ್ಲಾ ರಕ್ತ ಹೆಪ್ಪುಗಟ್ಟಿ ಕಲೆಗಳಾಗುತ್ತಾ ಹೋಯಿತು. ಜ್ವರ, ರಕ್ತವಾಂತಿ ಸರ್ವೇಸಾಮಾನ್ಯವಾಗುತ್ತಾ ಹೋಯಿತು. ದೃಷ್ಟಿ ದೋಷ, ಮೂಳೆಗಳ ತೊಂದರೆ ಇವುಗಳೇ ಅಲ್ಲದೇ ತಾಯಿಗರ್ಭದಲ್ಲಿದ್ದ ಹಲವಾರು ಜೀವಗಳೂ ಮರಣ ಹೊಂದಿದವು. ಸಣ್ಣ ತಲೆಯ ಶಿಶು, ಅಂಗವಿಕಲ ಶಿಶುಗಳು ಅಮೇರಿಕಾದ ರಾಕ್ಷಸೀ ಕೃತ್ಯದ ಕಹಿ ಗುರುತಾಗಿ ಹೊರ ಬಂದವು.

ಹಬಾಕುಷ (ಸ್ಫೋಟದಲ್ಲಿ ನೊಂದವರು) ಜನಾಂಗದ ಸಂಖ್ಯೆ 1976 ರ ಹೊತ್ತಿಗೆ 364, 261 ಇಡೀ ಜಪಾನಿನಲ್ಲಿ. ಅದರಲ್ಲಿ 289,411 ಮಂದಿ ಹಿರೋಷಿಮಾ ನಾಗಸಾಕಿ ದುರಂತದವರೇ ಹೆಚ್ಚಾಗಿದ್ದರು. ಈಗ ಈ ದಾರುಣ ಘಟನೆಯ ನಲವತ್ತು ವರ್ಷಗಳ ನಂತರ ಹಬಾಕುಷ ಮಂದಿ ಮುಪ್ಪನ್ನು ಸ್ವಾಗತಿಸುತ್ತಿರುವ ವೇಳೆಗೆ ನಂತರದ ಪೀಳಿಗೆಗಳೂ ಸಹ ಅದೇ ರೋಗಗಳಿಂದ ಬಳಲುತ್ತಿದ್ದಾರೆ. ಈ ಅನುವಂಶೀಯತೆಯಿಂದಾಗಿ ಜಪಾನ್ ಆರೋಗ್ಯ ಕೇಂದ್ರದ ಸಮೀಕ್ಷೆಯ ಪ್ರಕಾರ ಪ್ರತೀ ಐದು ಮಂದಿಗೆ ಒಬ್ಬರು ವಿಕಿರಣ ತೊಂದರೆಯಿಂದ ಬಳಲುತ್ತಿದ್ದಾರೆ.

ಈ ಮಧ್ಯ ಬಾಂಬ್ ಸ್ಫೋಟಕ್ಕೊಳಗಾದ ಮಂದಿಯಲ್ಲಿ ಹಲವರು ಕೆಲಸಕ್ಕಾಗಿ, ಮದುವೆಯಾಗಲು ಸಂಗಾತಿಗಾಗಿ ಹಾರೈಸುತ್ತಾರೆ. ಆದರೆ ಆ ಬಾಂಬ್ ಸ್ಫೋಟ ಇವರಲ್ಲಿನ್ನೂ ಮಾನಸಿಕ ಆಘಾತವನ್ನುಂಟು ಮಾಡಿದೆ. ತಮ್ಮಿಂದ ಮುಂದೆ ಹುಟ್ಟುವ ಜೀವಗಳೂ ಸಹ ನಮ್ಮ ದೇಹದಲ್ಲಿರುವ ವಿಕಿರಣತೆಯ ಅಪಾಯಗಳನ್ನು ಮತ್ತೆ ಮುಂದಿನ ಜನಾಂಗಕ್ಕೆ ನೀಡದಂತಾಗಲಿ ಎಂದು ಮದುವೆಯಾಗದೆ, ಸಂಗಾತಿಯ ಆಕ್ಕರೆಯಿಲ್ಲದೆ ಬಳಲುತ್ತಿದ್ದಾರೆ. ಇವರೆಲ್ಲರ ನಿಟ್ಟುಸಿರುಗಳ ಹಿಂದೆ ಅಮೇರಿಕಾ ಬಾಂಬ್ ಹಿಡಿದು ನಿಂತಿದೆ.

ದೇಶದ ಐಕ್ಯತೆ ಸಮಗ್ರತೆಗೆ ಗಂಡಾಂತರ

ಎಡರಂಗ ಅಧಿಕಾರದಲ್ಲಿರುವ ಪ. ಬಂಗಾಲ-ತ್ರಿಪುರಗಳನ್ನು ಬಿಟ್ಟು, ಬಂಡವಳಶಾಹಿ ಸರಕಾರಗಳು ಆಳುತ್ತಿರುವ ಪ್ರತಿಯೊಂದು ರಾಜ್ಯದಲ್ಲಿಯೂ ಛಿದ್ರಕಾರಿ-ಜಾತೀಯವಾದಿ, ಭಯೋತ್ಪಾದಕ ಶಕ್ತಿಗಳು ನೆಲೆನಿಂತು ತಮ್ಮ ಭೂಗತ-ಬಹಿರಂಗ ಚಟುವಟಿಕೆಗಳನ್ನು ನಿರ್ಭಯದಿಂದ, ಆಳುವ ಪಕ್ಷಗಳ ಪ್ರೋತ್ಸಾಹದಿಂದ ಮುಂದುವರಿಸಿವೆ. ಅಂಥ ದೇಶದ್ರೋಹಿ ಶಕ್ತಿಗಳನ್ನು ಸಿ.ಪಿ.ಐ (ಎಂ) ಪ್ರಬಲವಾಗಿರುವ ಎರಡು ರಾಜ್ಯಗಳಲ್ಲಿ ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗಿದ್ದರೆ ಸಿಪಿಐ(ಎಂ) ಮುಖಂಡತ್ವದ ಎಡರಂಗ ಸರಕಾರಗಳಿಂದ ಅಂಥವುಗಳು ತಲೆ ಎತ್ತದಂತೆ, ತಲೆಎತ್ತಿದರೂ ಕೂಡಲೇ ಅವುಗಳನ್ನು ತಡೆಹಿಡಿಯಲು ಸಾಧ್ಯವಾಗಿದೆ. ಹಾಗಿರುವಾಗ ಕಾಂಗ್ರೆಸ್ ರಾಜ್ಯಗಳಲ್ಲಿ ಅದು ಯಾಕೆ ಸಾಧ್ಯವಾಗುತ್ತಿಲ್ಲೆಂಬುದನ್ನು ಜನರು ತಿಳಿದುಕೊಳ್ಳುವುದು ಅಗತ್ಯ.

"ಈ ವರ್ಷ ದೇಶದಲ್ಲಿ ಜಾತೀಯ ದಂಗೆಗಳು ಹೆಚ್ಚಾಗಿವೆ. ಶಂಕರಾಚಾರ್ಯ, ಬುದ್ಧ, ಮಹಾವೀರ, ಅಶೋಕ ಚಿಸ್ತಿ, ಕಬೀರ, ನಾನಕ, ಮಹಾತ್ಮಾ ಗಾಂಧಿಯವರ ಭೂಮಿಯಲ್ಲಿ ದ್ವೇಷ ಮತ್ತು ಧರ್ಮಾಂಧತೆಯ ಸುಳಿಗಾಳಿ ಎದ್ದಿದೆ. ನಮ್ಮನ್ನೆದುರಿಸುವ ಈ ಅಪಾಯವನ್ನು ಗುರ್ತಿಸಿ, ಈ ಜಾತೀವಾದದ ವಿರುದ್ಧ ಐಕ್ಯಹೋರಾಟ ಮಾಡಲು ಭಿನ್ನಾಭಿಪ್ರಾಯಗಳನ್ನು ಬಿಟ್ಟು ಬಿಡಿ ಎಂದು ಗೃಹಮಂತ್ರಿ ಬೂಟಾಸಿಂಗ್ ಅವರು ಲೋಕಸಭೆಯಲ್ಲಿ ವಿನಂತಿ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ಸಿನ ದುರ್ಬಲತೆ ಇದರಲ್ಲಿ ಎದ್ದು ಕಾಣುತ್ತಿದೆ

ರಾಷ್ಟ್ರೀಯ ಸಮಗ್ರತೆಗಾಗಿ ಚಳುವಳಿ

ಇಂಥ ಪರಿಸ್ಥಿತಿಯಲ್ಲಿ ನಮ್ಮ ಪಕ್ಷ ಸ್ವತಂತ್ರವಾಗಿಯೂ, ರಾಷ್ಟ್ರೀಯ ಸಮಗ್ರತೆಗಾಗಿ ಹೋರಾಡಲು ತಯಾರಿರುವ ಇತರ ಪಕ್ಷಗಳೊಡನೆ ಸೇರಿ ರಾಷ್ಟ್ರೀಯ ಐಕ್ಯತೆಯನ್ನು ಬಲಪಡಿಸಲು, ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ಬಯಲಿಗಿಳಿಯಬೇಕು. ಆ ಕಾರಣದಿಂದಲೇ ರಾಷ್ಟ್ರೀಯ ಭಾವೈಕ್ಯತಾ ಸಪ್ತಾಹ ಆಚರಿಸಬೇಕೆಂದು ಕೇಂದ್ರ ಸಮಿತಿ ಕರೆ ಕೊಟ್ಟಿದೆ.

ಅದೇ ಸಮಯದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು ಆಗಸ್ಟ 9 ರಂದು ರಾಷ್ಟ್ರೀಯ ಭಾವೈಕ್ಯ ದಿನವನ್ನಾಗಿ ಆಚರಿಸಲು ಕರೆ ನೀಡಿವೆ.

ಈ ಭಾವೈಕ್ಯತಾ ಸಪ್ತಾಹದಲ್ಲಿ ಪಕ್ಷದ ಪ್ರತಿಯೊಂದು ಘಟಕ ಹಾಗೂ ಕಾರ್ಮಿಕ ಸಂಘ ದೇಶದ ತುಂಬೆಲ್ಲ ಇರುವ ಛಿದ್ರಕಾರಿ ಶಕ್ತಿಗಳನ್ನು ಅವರ ಚಟುವಟಿಕೆಗಳನ್ನು ಬಯಲಿಗೆಳೆಯಬೇಕು. ಪಂಜಾಬಿನ ಸೀಖ್ ತೀವ್ರಗಾಮಿಗಳು, ದೇಶಾದ್ಯಂತ ಇರುವ

6ನೇ ಪುಟ ನೋಡಿರಿ

ಮಾಸಿಕ ಬಸ್ ಪಾಸ್‌ಗೆ ಒತ್ತಾಯಿಸಿ ಎಸ್.ಎಫ್.ಐ. ಪ್ರದರ್ಶನ

ಭಾರತ ವಿದ್ಯಾರ್ಥಿ ಫೆಡರೇಷನ್ ಬೆಂಗಳೂರುಜಿಲ್ಲಾ, ಆಶ್ರಯದಲ್ಲಿ 17-7-86 ರಂದು ಬೆಂಗಳೂರು ಸಾರಿಗೆ ಸಂಸ್ಥೆ ಬಸ್ ನಿಲ್ದಾಣದ ಮುಂದೆ ಬೆಳಿಗ್ಗೆ 11 ಗಂಟೆಗೆ ಪಾಸ್ ವಿತರಣೆಯ ಕೌಂಟರ್ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿತು.

ನಗರದ ವಿವಿಧ ಶಾಲಾ-ಕಾಲೇಜುಗಳ ನೂರಾರು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. 6 ತಿಂಗಳಿಗೆ ಒಂದೇ ಬಾರಿ 60-90 ರೂ ಹಣ ತೆತ್ತು ಬಸ್ ಪಾಸ್ ಪಡೆಯಬೇಕೆಂಬ ಬಿ.ಟಿ.ಎಸ್. ಆಡಳಿತ ವರ್ಗದ ಹೊಸ ನಿಯಮದಿಂದ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಕೇವಲ ಆಡಳಿತಾತ್ಮಕ ಅನುಕೂಲಕ್ಕಾಗಿ ಜಾರಿಗೆ ತರಲಾಗಿರುವ ಈ ಕ್ರಮವನ್ನು ಕೂಡಲೇ ಹಿಂತೆಗೆದುಕೊಂಡು ಮೊದಲಿನಂತೆ ಮಾಸಿಕ ಬಸ್ ಪಾಸ್ ನೀಡುವ ಪದ್ಧತಿಯನ್ನು ಮುಂದುವರಿಸಬೇಕೆಂದು ಒತ್ತಾಯಿಸಿ ಬೆಂಗಳೂರು ನಗರ ಸಾರಿಗೆ ಅಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು.

ಸೆಂಟ್ರಲ್ ಜ್ಯೂನಿಯರ್ ಕಾಲೇಜು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಮೆರವಣಿಗೆ ನಡೆಸಿದರು. ಮಹಾರಾಣಿ ಕಾಲೇಜು, ಸರ್ಕಾರಿ ವಿಜ್ಞಾನ ಕಾಲೇಜು ಯಡಿಯೂರು ಜ್ಯೂನಿಯರ್ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಿನಾಂಕ 18-7-86 : ಆರು ತಿಂಗಳಿಗೊಮ್ಮೆ ಒಂದೇ ಬಾರಿ ವಿದ್ಯಾರ್ಥಿಗಳ ಪಾಸ್ ಪಡೆಯುವ ಕ್ರಮವನ್ನು ಬದಲಿಸಿ ಪ್ರತಿ ತಿಂಗಳು ನವೀಕರಿಸಲು ಸಾರಿಗೆ ಸಂಸ್ಥೆಯ ಆಡಳಿತವರ್ಗ ಅನುಕೂಲ ಮಾಡಿಕೊಟ್ಟಿರೆ ವಿದ್ಯಾರ್ಥಿ ಪೋಷಕರ ಪ್ರತಿಭಟನೆಗೆ ಮಣಿದು ಸಾರಿಗೆ ಸಂಸ್ಥೆಯ ಆಡಳಿತವರ್ಗ ತಮ್ಮ ನಿರ್ಧಾರವನ್ನು ಬದಲಿಸಿರುವುದನ್ನು ಎಸ್. ಎಫ್. ಐ. ಸ್ವಾಗತಿಸಿದೆ.

ಡಿವೈಎಫ್‌ಐ ಶಿಬಿರ

ಡಿವೈಎಫ್‌ಐ ಉಳ್ಳಾಲ ವಲಯ ಸಮಿತಿಯ ಕಾರ್ಯಕರ್ತರ ತರಬೇತಿ ಶಿಬಿರ ಜೂನ 22 ರಂದು ಯಶಸ್ವಿಯಾಗಿ ನಡೆಯಿತೆಂದು ವರದಿಯಾಗಿದೆ ಶಿಬಿರದಲ್ಲಿ ಒಟ್ಟು 65 ಮಂದಿ ಕಾರ್ಯಕರ್ತರು ಭಾಗವಹಿಸಿದ್ದರೆಂದೂ, ಶಿಬಿರದ ಮುಖ್ಯ ಉಪನ್ಯಾಸಕರಾಗಿ ಕಾ. ಬಿ. ವಿಷ್ಣುಮೂರ್ತಿ ಭಟ್ ಆಗಮಿಸಿದ್ದರೆಂದೂ ಪ್ರಕಟನೆ ತಿಳಿಸಿದೆ. ಕಾ. ರಮೇಶ್ ಉಳ್ಳಾಲ್‌ರವರು ಸ್ವಾಗತಿಸಿದ ನಂತರ ಕಾ. ಮಹಾಬಲ ವಡೇರಹೋಬಳಿ ಡಿವೈಎಫ್‌ಐ ಕಾರ್ಯಕ್ರಮವನ್ನು ವಿವರಿಸಿದರು. ಕೊನೆಯಲ್ಲಿ ಕಾ ಯು. ಬಿ. ನಾರಾಯಣ ಧನ್ಯವಾದ ಅರ್ಪಿಸಿದರೆಂದು ವರದಿಯಾಗಿದೆ.

ಕುಡಿಯುವನೀರು ರೋಗದ ತವರು

(3ನೇ ಪುಟದಿಂದ)

ಲಿಲ್ಲ ಕೋಟ್ಯಾಂತರ ರೂ. ವೆಚ್ಚದಲ್ಲಿ ಕಂಪ್ಯೂಟರುಗಳನ್ನು ತಂದು ನಿರುದ್ಯೋಗ ಹೆಚ್ಚಿಸುವ ರಾಜೀವ್ ಗಾಂಧಿ ಸರಕಾರಕ್ಕೆ, 21ನೇ ಶತಮಾನಕ್ಕೆ ಹೋಗುವ ನಮ್ಮಬಡಜನರು ನೀರಿಲ್ಲದೆ ಹೇಗೆಬದುಕಿಯಾರೆಂದುತಿಳಿಯಲೇಇಲ್ಲ. ನೀರಿನ ಸಮಸ್ಯೆಯ ಪರಿಹಾರಕ್ಕೆ ಯಾವುದೇ ಕ್ಲಿಷ್ಟ ತಾಂತ್ರಿಕತೆ ಬೇಕಿಲ್ಲ. ನೀರಿನ ಸಮಸ್ಯೆ ಬರೀ ನೀರಿನ ಸಮಸ್ಯೆ ಅಷ್ಟೇ ಅಲ್ಲ ಇತರ ಸಮಸ್ಯೆಯ ಒಂದು ಭಾಗವಾಗಿದೆ.

ಅಷ್ಟೇ ಅಲ್ಲ ನಿಮ್ಮ ಊರುನಗರಗಳ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಐಕ್ಯರಂಗಕ್ಕೆ ಬರೆಯಿರಿ.

ದೇಶದ ಐಕ್ಯತೆ ಸಮಗ್ರತೆಗೆ ಗಂಡಾಂತರ

ಹಿಂದೂ ಜಾತಿವಾದಿಗಳು, ಮುಸ್ಲಿಂ ಪಂಥವಾದಿಗಳು, ಗೂರ್ಖಾಲ್ಯಾಂಡ, ಟಿ ಎನ್.ವಿ. ಗಳಂತ ಪ್ರತ್ಯೇಕವಾದಿ ಚಳುವಳಿ ಮುಂತಾದವುಗಳೆಲ್ಲ ದೇಶದ ಐಕ್ಯತೆ ಹಾಗೂ ಸಮಗ್ರತೆಗೆ ಅಪಾಯಕಾರಿಯಾಗಿವೆ ಎಂದು ಜನರಿಗೆ ಮನದಟ್ಟು ಮಾಡಿಕೊಡಬೇಕು. ಅಂಥ ಚಟುವಟಿಕೆಗಳಿಗೆ ಸಾಮ್ರಾಜ್ಯಶಾಹಿಗಳ ಬೆಂಬಲವನ್ನು ಬಯಲುಗೊಳಿಸಬೇಕು.

ಸಭೆ, ಮತಪ್ರದರ್ಶನ, ವಿಚಾರ ಗೋಷ್ಟಿ, ಸಾರ್ವಜನಿಕ ಭಾಷಣಗಳ ಮೂಲಕ ಒಂದು ವಾರ ದಿನಾಚರಣೆ ಯಶಸ್ವಿಗೊಳಿಸಬೇಕೆಂದು ಕೇಂದ್ರ ಸಮಿತಿ ಕರೆನೀಡಿದೆ.

ರಾಜೀವ್ ಗಾಂಧಿ ಸರಕಾರದ ಆರ್ಥಿಕ ರಾಜಕೀಯ ನೀತಿಯಿಂದಾಗಿ ಜನರಲ್ಲಿ ನಿರಾಶೆ ದೈನಂದಿನ ಹೆಚ್ಚಾಗುತ್ತಿರುವಾಗ, ಜನರನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಯ ಕಡೆ, ಕಾಂಗ್ರೆ ಬದಲಾಗಿ, ಬಂಡವಳಶಾಹಿ ಆಡಳಿತೆಯ ಬದಲಾಗಿ, ಪರ್ಯಾಯ ಕಾರ್ಯಕ್ರಮದತ್ತ ತಿರುಗಿಸಲು, ದೇಶದ ಐಕ್ಯತೆ-ಸಮಗ್ರತೆಗಾಗಿ ಜನರುಹೋರಾಡುವಂತೆ ಮಾಡಲು ಈ ಚಳುವಳಿ ಅತ್ಯಗತ್ಯ.

ಆದ್ದರಿಂದ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದಂತೆಯೇ ಈಗ ದೇಶದಐಕ್ಯತೆ-ಸಮಗ್ರತೆಗಾಗಿಹೋರಾಡೋಣ.

"ಕನ್ನಡ ರಾಷ್ಟ್ರ" ಕರೆಯ ಖಂಡನೆ

ದಿನಾಂಕ 6-7-86 ರಂದು ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಸಮುದಾಯ ಸಮನ್ವಯ ಸಮಿತಿ ಸಭೆಯಲ್ಲಿ ಈ ಕೆಳಗಿನ್ನಂತೆ ನಿರ್ಣಯ ಸ್ವೀಕರಿಸಲಾಯಿತು.

ಇತ್ತೀಚಿನ ಕೆಲವು ದಿನಗಳಲ್ಲಿ, ಒಂದು ಪ್ರತ್ಯೇಕ ಕನ್ನಡ ರಾಷ್ಟ್ರಕ್ಕಾಗಿ ಕೆಲವರಿಂದ ಎದ್ದ ಕೂಗು ಕರ್ನಾಟಕ ರಾಜ್ಯ ಸಮುದಾಯವನ್ನು ದಿಗ್ಭ್ರಾಂತಗೊಳಿಸಿದೆ. ಇಂಥ ಅಪಾಯಕಾರಿ ಧೋರಣೆಗಳನ್ನು ಸಮುದಾಯವು ತೀವ್ರವಾಗಿ ಖಂಡಿಸುತ್ತದೆ. ನಮಗೆಲ್ಲಾ ಕನ್ನಡ ಬೇಕು, ಆದರೆ ಭಾರತವು ಬಲಶಾಲಿಯಾಗಿ ಒಗ್ಗಟ್ಟಿನಿಂದ ಇದ್ದರೆ ಮಾತ್ರ, ಕನ್ನಡವಾಗಲಿ, ಇತರ ಯಾವುದೇ ಭಾರತೀಯ ಭಾಷೆ ಅಥವಾ ಪ್ರಾಂತೀಯ ಸಂಸ್ಕೃತಿ ಉಳಿಯುವುದು ಸಾಧ್ಯ ಎಂದು ನಮ್ಮ ಅಭಿಮತ. ಪ್ರತ್ಯೇಕವಾದದ ಇಂಥ ಹುಚ್ಚುತನದ ಧೋರಣೆಗಳನ್ನು ಸಮಗ್ರ ಕನ್ನಡ ಹಾಗೂ ಭಾರತೀಯ ಜನತೆ ವಿರೋಧಿಸಬೇಕೆಂದು ಕರ್ನಾಟಕ ರಾಜ್ಯ ಸಮುದಾಯ ಸಮನ್ವಯ ಸಮಿತಿ ಕಳಕಳಿಯ ಕರೆ ನೀಡುತ್ತದೆ.

ಮಂಗಳೂರಿನಲ್ಲಿ ಕಾಫಿ ಕ್ಯೂರಿಂಗ್ ಮಹಾಸಭೆ

ಚಿಕ್ಕಮಗಳೂರಿನ ಕಾಫಿಕ್ಯೂರಿಂಗ ಮತ್ತು ಇತರ ಕಾರ್ಮಿಕ ಸಂಘದ ಮಹಾಸಭೆ ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿತು. ಆಗಸ್ಟ ತಿಂಗಳಲ್ಲಿ ರೈತ ಸಂಘ ಮತ್ತು ಸಿ.ಐ.ಟಿ.ಯು. ಹಾಕಿಕೊಂಡಿರುವ ಎಲ್ಲ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು. ಕನಿಷ್ಟ ಕೂಲಿ ಮತ್ತು ತುಟ್ಟಿ ಭತ್ತೆ ಕೊಡದಿರುವ ಮಾಲಕರ ಮೇಲೆ ಒತ್ತಾಯತರಲು ನಿರ್ಧರಿಸಲಾಯಿತು.

ಕಾರ್ಯದರ್ಶಿ ಎ ಕೆ. ವಿಶ್ವನಾಥ ವರದಿ ಮಂಡಿಸಿದರು. ಮುಂದಿನವರ್ಷಕ್ಕೆ ಸಿ. ನಂಜುಂಡಪ್ಪ ಅಧ್ಯಕ್ಷ, ಎ. ಕೆ. ವಿಶ್ವನಾಥ ಪ್ರ. ಕಾರ್ಯದರ್ಶಿಯಾಗಿರುವ ಹೊಸಕಮಿಟಿರಚಿಸಲಾಯಿತು.

ಐಕ್ಯರಂಗಕ್ಕೆ ಚಂದಾದಾರರಾಗಿರಿ

ವಾರ್ಷಿಕ ಚಂದಾ	—40ರೂ
ಅರ್ಧ ವಾರ್ಷಿಕ ಚಂದಾ	—20ರೂ
ಬಿಡಿ ಪ್ರತಿಯ ಬೆಲೆ	—80ಪೈಸ

ಐಕ್ಯರಂಗ ಪ್ರಗತಿಪರ ನೀತಿಗಳನ್ನೇ ಧೃಢವಾಗಿ ಪ್ರತಿಪಾದಿಸುವ ಕನ್ನಡದ ಏಕೈಕ ವಾರ ಪತ್ರಿಕೆ

ಎಡಿನ್ ಬರ್ಗ್ ಕಾಮನ್ ವೆಲ್ತ್ ಆಟಗಳನ್ನು ಬಹಿಷ್ಕರಿಸಿರಿ

ದಕ್ಷಿಣ ಆಫ್ರಿಕದ ಬಿಳಿ ಸರಕಾರ ಕರಿಯ ಜನರ ಮೇಲೆ ನಡೆಸುತ್ತಿರುವ ಅತ್ಯಾಚಾರದ ವಿರುದ್ಧ, ಹಾಗೆಯೇ ಆಫ್ರಿಕದ ನೆರೆ ರಾಜ್ಯಗಳಾದ. ನಮೀಬಿಯಾ ಮೊದಲಾದ ದೇಶಗಳ ಮೇಲೆ ಆಕ್ರಮಣ ನಡೆಸಿರುವುದನ್ನು ಜಗತ್ತಿನ ಸ್ವಾತಂತ್ರ್ಯ ಪ್ರಿಯ ಜನತೆ ಪ್ರತಿಭಟಿಸಿ ಆರ್ಥಿಕ ದಿಗ್ಬಂಧನ ಹೇರಬೇಕೆಂದು ಒತ್ತಾಯಿಸುತ್ತಿದ್ದಾಗ ಭಾರತ ಸರಕಾರವೂ ಅಂಥ ದಿಗ್ಬಂಧನಕ್ಕಾಗಿ ಒತ್ತಾಯ ಪಡಿಸುತ್ತಿದೆ. ಆದರೆ ಇಂಗ್ಲೆಂಡಿನ ಥಾಚರ್ ಸರಕಾರವನ್ನು ವಿರೋಧಿಸಿ ಬಿಳಿ ಸರಕಾರಕ್ಕೆ ಬೆಂಬಲ ನೀಡುತ್ತಿದೆ. ಹೀಗಿರುವಾಗ ಎಡಿನ್‌ಬರೋ ಕಾಮನ್‌ವೆಲ್ತ್ ಆಟಗಳಿಗೆ ಬಹಿಷ್ಕಾರ ಹಾಕಬೇಕೆಂದು ಅದರಲ್ಲಿ ಭಾಗವಹಿಸಬಾರದೆಂದೂ ಆಫ್ರಿಕದ ರಾಷ್ಟ್ರಗಳು ನಿರ್ಣಯಿಸಿದರೂ ಕೂಡ ಭಾರತ ಸರಕಾರ ಅದರ ಕುರಿತು ನಿರ್ಣಯ ತೆಗೆದುಕೊಳ್ಳದಿರುವುದು ಖಂಡನೀಯವೆಂದೂ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಆಫ್ರಿಕದ ಜನರಿಗೆ ಬೆಂಬಲ ನೀಡುತ್ತಿರುವ ಭಾರತದ ಜನರ ನಿಲುವಿಗೆ ವಿರುದ್ಧವಾಗಿದೆಂದು ಲೋಕಸಭೆಯಲ್ಲಿ ಸಿ.ಪಿ.ಐ (ಎಂ) ಗುಂಪಿನ ಬಸುದೇವ ಆಚಾರ್ಯ, ರಾಜ್ಯಸಭೆಯ ಮುಖಂಡ ದೀಪೇನ್ ಘೋಷ್ ಪತ್ರಿಕಾ ಹೇಳಿಕೆ ನೀಡಿದ್ದಾರೆ. ಕೇಂದ್ರ ಸರಕಾರ ಎಡಿನ್ ಬರ್ಗ್ ಕಾಮನ್ ವೆಲ್ತ ಆಟಗಳಲ್ಲಿ ಭಾಗವಹಿಸಲು ಭಾರತದ ಆಟಗಾರರನ್ನು ಕಳುಹಿಸಬಾರದೆಂದು ಕೇಂದ್ರ ಸರಕಾರವನ್ನು ಅವರು ಒತ್ತಾಯಿಸಿದ್ದಾರೆ.

ಆಂಧ್ರದಲ್ಲಿ ಬೃಹತ್ ವಿದ್ಯಾರ್ಥಿ ಚಳುವಳಿ

ಪಠ್ಯಪುಸ್ತಕ, ನೋಟು ಪುಸ್ತಕಗಳನ್ನು ಸರಬರಾಜು ಮಾಡಬೇಕೆಂದು ಬರಗಾಲ ಪೀಡಿತ ಪ್ರದೇಶಗಳಲ್ಲಿ ವಿದ್ಯಾರ್ಥಿಗಳ ಫಿ ರದ್ದು, ಎಸ್.ಸಿ, ಎಸ್ ಟಿ. ಬಿ ಸಿ. ವಿದ್ಯಾರ್ಥಿಗಳ ವೇತನದಲ್ಲಿ ಹೆಚ್ಚಳ, ಹಾಸ್ಟಲ್ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯ, ಮುಂತಾದ ಸಮಸ್ಯೆಗಳ ಕುರಿತು ಭಾರತ ವಿದ್ಯಾರ್ಥಿ ಫೆಡರೇಷನ್ ಆಂಧ್ರ ಘಟಕದ ಕರೆಯ ಮೇರೆಗೆ ದಿನಾಂಕ ಜುಲೈ 10 ರಂದು ಪ್ರೌಢ ಶಾಲೆಯವಿದ್ಯಾರ್ಥಿಗಳ ಬೃಹತ್ ಹೋರಾಟ ನಡೆಯಿತು.

ಶಾಲೆಗಳನ್ನು ಬಹಿಷ್ಕರಿಸಿ ಮುಷ್ಕರ ಹೂಡಿದ ಲಕ್ಷಾಂತರ ವಿದ್ಯಾರ್ಥಿಗಳು ಆಂಧ್ರ ಪ್ರದೇಶದ ಎಲ್ಲಾ ಜಿಲ್ಲಾ ಕೇಂದ್ರಗಳು ತಾಲ್ಲೂಕು ಕೇಂದ್ರಗಳಲ್ಲಿ ಬಹಿರಂಗ ಸಭೆ ನಡೆಸಿ ಅಧಿಕಾರಿಗಳಿಗೆ ಮನವಿ ಅರ್ಪಿಸಿದರು. ಸಾವಿರಾರು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಸಿಪಿಸಿ ಕೆಲಸಗಾರರಿಗೆ ವೇತನ ಹೆಚ್ಚಳ ಒಪ್ಪಂದ

ಜಿಲ್ಲೆಯ ಪ್ರಮುಖ ಸಾರಿಗೆ ಸಂಸ್ಥೆಯಲ್ಲೊಂದಾದ ಮೆ "ಸಿಪಿಸಿಸಂಸ್ಥೆಯ" ಕೆಲಸಗಾರರಿಗೆ ವೇತನ ಹೆಚ್ಚಳಕ್ಕೆ ಸಂಬಂಧಪಟ್ಟ ಮೋಟಾರ ಟ್ರಾನ್ಸ್‌ಪೋರ್ಟ್ ಎಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ (ಸಿ.ಐ ಟಿ. ಯು) ಮತ್ತು ಮೆನೇಜ್‌ಮೆಂಟ್ ನಡುವೆ 3-7-86 ರಂದು ಒಪ್ಪಂದಕ್ಕೆ ಬರಲಾಯಿತು. ಈ ಒಪ್ಪಂದದ ಪ್ರಕಾರ ಕೆಲಸಗಾರರು 1-6-86 ರಂದು ತಿಂಗಳಿಗೆ ರೂ. 40 ರಿಂದ ರೂ. 157 ರವರೆಗೆ ಹೆಚ್ಚಿನ ವೇತನವನ್ನು ಪಡೆಯಲಿದ್ದಾರೆ. ಒಪ್ಪಂದಕ್ಕೆ ಮೆನೇಜಮೆಂಟ್ ಪರವಾಗಿ, ಶ್ರೀನಿವಾಸ ವಿ ಕುಡ್ವ. ಯು. ಶ್ಯಾಮ ಮತ್ತು ಎ. ಎಸ್. ನಾಯಕ ಮತ್ತು ಕೆಲಸಗಾರರ ಪರವಾಗಿ, ಪಿ. ರಾಮಚಂದ್ರ ರಾವ್. ಪಿ. ಉಮೇಶ್ ಭಂಡಾರಿ ಮತ್ತು ಜಿ. ನಾರಾಯಣ ಪೈ ಮೊದಲಾದವರು ಸಹಿ ಹಾಕಿದ್ದಾರೆ.

ಜಾನಮ್ಮನವರ ನಿಧನ

ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕೋಶಾಧಿಕಾರಿಯಾದ, ಬಿ. ಗೋಪಾಲ ಪೂಜಾರಿ ಹಾಗೂ ಅದೇ ಸಂಘದ ಜೊತೆಕಾರ್ಯದರ್ಶಿ ಬಿ. ಕೃಷ್ಣಪ್ಪ- ಇವರ ತಾಯಿ ಶ್ರೀಮತಿ ಜಾನಮ್ಮ (60) ನವರು ಅನಾರೋಗ್ಯದಿಂದ 13-7-1986

ಅವರ ನಿಧನಕ್ಕೆ :

ವಾಮಂಜೂರು ಪ್ರದೇಶ ಬೀಡಿ ಕೆಲಸಗಾರ ಸಂಘ, ವಾಮಂಜೂರು.

ಜೈ ಶಂಕರ ಮಿತ್ರ ಮಂಡಳಿ, ವಾಮಂಜೂರು.

ಡಿ.ವೈ ಎಫ್.ಐ. ವಾಮಂಜೂರು ಘಟಕ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಾಮಂಜೂರು ಶಾಖೆಗಳು.

ಸಂತಾಪ ಸೂಚಿಸಿವೆ.

ಅಂತರ್ರಾಷ್ಟ್ರೀಯ ರಂಗದಲ್ಲಿ..........

ಕಾಮನ್‌ವೆಲ್ತ್ ಕ್ರೀಡಾ ಕೂಟಕ್ಕೆ ಭಾರತದ ಬಹಿಷ್ಕಾರ

ಕರಿಯರ ವಿರುದ್ಧ ಅಮಾನುಷ ವರ್ಣಭೇದ ನೀತಿಯನ್ನು ಅನುಸರಿಸಿಕೊಂಡು ಬರುತ್ತಿರುವ ದಕ್ಷಿಣ ಆಫ್ರಿಕದ ವಿರುದ್ಧ ಆರ್ಥಿಕ ನಿರ್ಬಂಧ ಹೇರಬೇಕೆಂದು ಒತ್ತಾಯಿಸಿ ಕಾಮನ್‌ವೆಲ್ತ್‌ಗೆ ಸೇರಿರುವ ಹೆಚ್ಚಿನ ರಾಷ್ಟ್ರಗಳ ಜೊತೆಗೆ ಭಾರತವೂ ಜುಲೈ 24 ರಂದು ಪ್ರಾರಂಭಗೊಳ್ಳಬೇಕಾಗಿದ್ದ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಬಹಿಷ್ಕಾರ ಹಾಕಿದೆ. ಇದರೊಂದಿಗೆ ಆಫ್ರಿಕಾದ ಹೆಚ್ಚಿನ ರಾಷ್ಟ್ರಗಳು, ಕೆರಿಬಿಯನ್ ಪ್ರದೇಶದ, ಏಶಿಯಾ-ಶಾಂತ ಸಾಗರ ವಲಯದ ರಾಷ್ಟ್ರಗಳನ್ನೂ ಒಳಗೊಂಡಂತೆ ಇಪ್ಪತ್ತೇಳು ರಾಷ್ಟ್ರಗಳು ಕ್ರೀಡಾಕೂಟಕ್ಕೆ ಬಹಿಷ್ಕಾರ ಘೋಷಿಸಿದಂತಾಗಿದೆ.

ಈ ಕಾಮನ್‌ವೆಲ್ತ್ ಎಂಬುದು ಬ್ರಿಟಿಷರು ಭಾರತವನ್ನು, ವಿಶ್ವದ ಅನೇಕ ರಾಷ್ಟ್ರಗಳನ್ನು ಆಕ್ರಮಿಸಿ ಆಳುತ್ತಿದ್ದ ಗತಕಾಲದ ಅವಶೇಷ. ಈ ರಾಷ್ಟ್ರಗಳಿಗೆ ವೀರಹೋರಾಟದ ಮೂಲಕ ಸ್ವಾತಂತ್ರ್ಯ ದೊರಕಿದಂದೇ ನಾಶವಾಗಬೇಕಾಗಿತ್ತು. ಆದರೆ ಭಾರತದ ಆಳುವ ಪಕ್ಷದ, ಬಂಡವಾಳಗಾರರ ಸ್ವಾರ್ಥ, ಒಡೆಯುವವರೊಡನೆಯೂ ಸಹಕಾರ ಎಂಬ ಮನೋಭಾವದ ಫಲವಾಗಿ ಈ ಕಾಮನ್‌ವೆಲ್ತ್ ಉಳಿದು ಬಂದಿತ್ತು. ಈಗ ದ. ಆಫ್ರಿಕಾದಲ್ಲಿ ಕರಿಯರ ವೀರಹೋರಾಟದ ಫಲವಾಗಿ ಇದರಲ್ಲಿ ಅಲ್ಲೋಲಕಲ್ಲೋಲವಾಗಿದೆ. ಸಾಮ್ರಾಜ್ಯಶಾಹೀ ದಮನಕಾರರಿಗೂ ಅವರ ಲಾಭಕೋರತನಕ್ಕೆ ತುತ್ತಾದ ಭಾರತ, ಜಾಂಬಿಯ, ಕೆನ್ಯಾ, ಜಿಂಬಾಬ್ವೆಗಳಂತಹ ಹಿಂದುಳಿದ ರಾಷ್ಟ್ರಗಳಿಗೂ ಯಾವ ಸಂಬಂಧವೂ ಇಲ್ಲ. ಕಾಮನ್‌ವೆಲ್ತ್‌ನಂತಹ ಅವಶೇಷಗಳು ಬೇಡ ಎಂದು ಸಿ.ಪಿ.ಐ.(ಎಂ) ಮೊದಲಿನಿಂದ ಪ್ರತಿಪಾದಿಸುತ್ತಿದ್ದುದು ಈಗ ಪ್ರತ್ಯಕ್ಷವಾಗಿ ಕಂಡಿದೆ. ಕಾಮನ್‌ವೆಲ್ತ್‌ನ 49 ಸದಸ್ಯ ರಾಷ್ಟ್ರಗಳಲ್ಲಿ 27 ಸದಸ್ಯ ರಾಷ್ಟ್ರಗಳು (ಅರ್ಧಕ್ಕೂ ಹೆಚ್ಚು) ಕ್ರೀಡಾ ಕೂಟವನ್ನು ಬಹಿಷ್ಕರಿಸಿವೆ.

ಭೋಗ ವಿಲಾಸದ ಚಿಂತೆ

"ದಕ್ಷಿಣ ಆಫ್ರಿಕಾದ ಜೊತೆ ಆರ್ಥಿಕ ಸಂಬಂಧಗಳನ್ನು ಕಡಿದುಕೊಂಡರೆ ಅಮೇರಿಕದ ಮಹಿಳೆಯರ ಆಭರಣಗಳಿಗೆ ವಜ್ರ ಸಿಗಲಾರದು. ಅಮೇರಿಕದ ಕಾರುಗಳ ಬಂಪರ್‌ಗಳಿಗೆ ಮತ್ತು ಸ್ನಾನಗೃಹದ ಉಪಕರಣಗಳಿಗೆ ಒಪ್ಪ ಕೊಡಲು ಕ್ರೋಮಿಯಂ ಲೋಹ ಸಿಗಲಾರದು" ಎಂದು ಅಮೇರಿಕನ್ ಆಡಳಿತೆಯ ವಕ್ತಾರರು ಅಲ್ಲಿನ ಜನರನ್ನು ಬೆದರಿಸುತ್ತಿರುವುದು ನಿಜಕ್ಕೂ ಹಾಸ್ಯಾಸ್ಪದ. ದ. ಆಫ್ರಿಕದ ಜನತೆ ತಮ್ಮ ಕ್ರೂರ ಆಡಳಿತೆಯ ವಿರುದ್ಧ ಸಾವು ಬದುಕಿನ ಹೋರಾಟ ನಡೆಸಿ ಸಾವಿರ ಸಂಖ್ಯೆಯಲ್ಲಿ ಆತ್ಮಬಲಿದಾನ ಮಾಡುತ್ತಿದ್ದಾಗಲೂ ಅಮೇರಿಕದ ಆಳುವ ವರ್ಗಗಳಿಗೆ ಆಭರಣಗಳಿಗೆ ಬೇಕಾದ ವಜ್ರ ವೈಢೂರ್ಯ ಮತ್ತು ಭೋಗ ವಿಲಾಸದ ವಸ್ತುಗಳ ಚಿಂತೆ.

ಅಮೇರಿಕದ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವ ಮತ್ತು ತನ್ನದೇ ಸ್ಥಾಪಿತ ಹಿತಾಸಕ್ತಿಗಳ ರಕ್ಷಣೆಗಾಗಿ ದ. ಆಫ್ರಿಕದ ವಿರುದ್ಧ ಆರ್ಥಿಕದಿಗ್ಬಂಧ ಹೇರಲು ಒಪ್ಪದಿರುವ ಬ್ರಿಟನ್‌ನ ವರ್ತನೆಗೆ ರೋಸಿ ಹೆಚ್ಚಿನ ಕಾಮನ್‌ವೆಲ್ತ್ ರಾಷ್ಟ್ರಗಳು ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಬಹಿಷ್ಕಾರ ಘೋಷಿಸಿದೆ. ಕಾಮನ್‌ವೆಲ್ತ್ ಕ್ರೀಡಾಕೂಟಗಳಿಗೆ ಬಹಿಷ್ಕಾರ ಹಾಕಕೂಡದೆಂದೂ ಕ್ರೀಡೆಯಲ್ಲಿ ರಾಜಕೀಯ ಬೆರೆಸುವುದು ಸರಿಯಲ್ಲವೆಂದೂ ಬ್ರಿಟಿಷ್ ಸರಕಾರದ ವಕ್ತಾರರು ಇದೀಗ ಬುದ್ಧಿವಾದ ಹೇಳಲಾರಂಭಿಸಿರುವುದು ವಿಚಿತ್ರ! ಬ್ರಿಟನಿನ ಜಗದ್ವಿಖ್ಯಾತ ಓಟಗಾರ ಸ್ಟೀವ್ ಕ್ರಾಮ್ ಹೇಳಿರುವಂತೆ ಆರು ವರ್ಷಗಳ ಹಿಂದೆ ಕ್ಷುಲ್ಲಕ ರಾಜಕೀಯ ನೆಪವೊಡ್ಡಿ ಮಾಸ್ಕೊ ಓಲಿಂಪಿಕ್ಸ್‌ಗೆ ಬಹಿಷ್ಕಾರ ಘೋಷಿಸಿದಾಗ ಬ್ರಿಟಿಷ್ ಆಡಳಿತೆಗೆ ಈ ಬುದ್ಧಿ ಎಲ್ಲಿ ಹೋಗಿತ್ತು? ಇದು ತೀರಾ ನಾಚಿಗೆಗೇಡಿತನ" ಎಂದಿದ್ದಾರೆ ಕ್ರಾಮ್.

ಅಲಿಪ್ತ ರಾಷ್ಟ್ರಗಳ ಅಧ್ಯಕ್ಷ ಸ್ಥಾನದಲ್ಲಿರುವ ಭಾರತ ಎಲ್ಲರಿಗಿಂತ ಮೊದಲೇ ಕಾಮನ್‌ವೆಲ್ತ್ ಕ್ರೀಡಾ ಕೂಟಗಳಿಗೆ ಬಹಿಷ್ಕಾರ ಹಾಕಿ ದ. ಆಫ್ರಿಕ ಮತ್ತು ಮುಂಚೂಣಿ ರಾಷ್ಟ್ರಗಳ ಜನತೆಯ ಜೊತೆ ತನ್ನ ಸಹಾನುಭೂತಿಯನ್ನು ಪ್ರಕಟಿಸಬೇಕಾಗಿತ್ತು. ತಡವಾಗಿಯಾದರೂ ಅದು ಈ ತೀರ್ಮಾನವನ್ನು ಕೈಗೊಂಡಿರುವುದು ಸ್ವಾಗತಾರ್ಹ. ಕಾಮನ್‌ವೆಲ್ತ್ ರಾಷ್ಟ್ರಗಳು ಕೈಗೊಂಡಿರುವ ಈ ನಿರ್ಧಾರ ವರ್ಣಭೇದ ನೀತಿಯ ವಿರುದ್ಧ ವಿಶ್ವವ್ಯಾಪಿ ಚಳುವಳಿಯು ಆರಂಭವಾಗಲಿ. ವರ್ಣಭೇದ ನೀತಿ ಕೊನೆಗೊಳ್ಳಲಿ.

ಪೋಲೆಂಡ್: ಆಹಾರ ಸಮೃದ್ಧಿ

ಪೋಲಿಶ್ ಸರಕಾರವು ಕಳೆದ ನಾಲ್ಕು ವರ್ಷಗಳಿಂದ ಕೈಗೊಂಡಿರುವ ಕೃಷಿ ಮತ್ತು ಹೈನುಗಾರಿಕೆಯ ಸುಧಾರಣೆಗಳಿಂದಾಗಿ ಪೋಲೆಂಡ್ ಕೆಲ ವರ್ಷಗಳ ಹಿಂದೆ ಅನುಭವಿಸುತ್ತಿದ್ದ ಆಹಾರದ ಕೊರತೆಯನ್ನು ನಿವಾರಿಸಿಕೊಂಡಿದೆಯೆಂದೂ ಇದೀಗ ಪೋಲಿಶ್ ಜನರಿಗೆ ಹೆಚ್ಚು ಮಾಂಸ ಮತ್ತು ಹೈನು ಉತ್ಪಾದನೆಗಳು ಲಭಿಸುತ್ತಿದೆಯೆಂದೂ ನವಚೀನಾ ವಾರ್ತಾ ಸಂಸ್ಥೆ ವರದಿಮಾಡಿದೆ.

ಸುಮಾರು 1980-81 ರ ವೇಳೆ ಪೋಲೆಂಡ್‌ನ ಆರ್ಥಿಕತೆ ಸಂಕಷ್ಟದಲ್ಲಿ ಸಿಲುಕಿದ್ದಾಗ ಆಹಾರ ವಸ್ತುಗಳ ಕೃತಕ ಅಭಾವವನ್ನೇ ನೆಪವಾಗಿಟ್ಟುಕೊಂಡು ಪ. ಜರ್ಮನಿ ಮತ್ತಿತರ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಪಿತೂರಿಯೊಂದಿಗೆ ಪೋಲೆಂಡಿನಲ್ಲಿ ಸಾಲಿಡಾರಿಟಿ ಎಂಬ ಸಂಘಟನೆ ಪ್ರತಿಕ್ರಾಂತಿಯ ಚಳುವಳಿ ನಡೆಸಿದ್ದು, ಬಂಡವಾಳಶಾಹಿ ಪತ್ರಿಕೆಗಳು ಜಗತ್ತಿನ ಎಲ್ಲೆಡೆ ಅದಕ್ಕೆ ವಿಪರೀತ ಪ್ರಚಾರ ನೀಡಿದ್ದವು. ಪೋಲಿಶ್ ಸರಕಾರ ಮತ್ತು ಅಲ್ಲಿನ ಕಮ್ಯುನಿಸ್ಟ್ ಪಕ್ಷವು ಈ ಪ್ರತಿಗಾಮಿ ಚಳುವಳಿಯನ್ನು ಪರಿಣಾಮಕಾರಿಯಾಗಿ ಎದುರಿಸಿ ಕಟ್ಟುನಿಟ್ಟಿನ ವ್ಯವಸಾಯ ನೀತಿ, ವಿತರಣೆ ಹಾಗೂ ಕೃಷಿಕ್ಷೇತ್ರದಲ್ಲಿ ತೀವ್ರ ಮತ್ತು ವ್ಯಾಪಕವಾದ ಸುಧಾರಣೆಗಳನ್ನು ಕ್ರಮಬದ್ಧವಾಗಿ ನಡೆಸಿಕೊಂಡು ಬಂದಿದೆಯಲ್ಲದೆ ಆ ಮೂಲಕ ದೇಶದಲ್ಲಿ ಧಾರಾಳವಾಗಿ ಮಾಂಸ, ಧಾನ್ಯಗಳು ಮತ್ತು ಹೈನು ಉತ್ಪಾದನೆಗಳು ದೊರೆಯುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ.

ಓರ್ಟೆಗಾ ಕೊಲೆಗೆ ಸಿಐಎ ಒಳಸಂಚು

ಜಗತ್ತಿನ ಎಲ್ಲೆಡೆ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಸರಕಾರಗಳನ್ನೂ ಸಮಾಜವಾದೀ ಮತ್ತು ಸಮತಾವಾದಿ ತತ್ವಗಳನ್ನು ನೆಚ್ಚಿಕೊಂಡಿರುವ ಸರಕಾರಗಳನ್ನೂ ಪತನಗೊಳಿಸಿ ಚಿಲಿದೇಶದ ಅಲೆಂಡೆಯಂತಹವರನ್ನು ಕೊಲೆಮಾಡಿ ಸೈನಿಕ ಕ್ಷಿಪ್ರಕ್ರಾಂತಿ ಮತ್ತು ಪ್ರತಿಕ್ರಾಂತಿ ನಡೆಸುವುದರಲ್ಲಿ ಸಿದ್ಧಹಸ್ತವೆನಿಸಿಕೊಂಡ ಅಮೇರಿಕದ ಸಿಐಎ ನಿಕರಾಗುವಾದಲ್ಲೂ ತನ್ನ ಪಿಶಾಚ ನೃತ್ಯ ನಡೆಸುತ್ತಿದೆ. ನಿಕರಾಗುವಾದ ಸಾಂಡಿನಿಸ್ಟಾ ರಂಗದ ಸರಕಾರದ ವಿರುದ್ಧ ಹಿಂಸಾತ್ಮಕ ಬುಡಮೇಲು ಕೃತ್ಯಕ್ಕೆ ತೊಡಗುವಂತೆ ಭಯೋತ್ಪಾದಕ "ಕಾಂಟ್ರಾ"ಗಳಿಗೆ ನೂರಾರು ಮಿಲಿಯ ಡಾಲರ್ ನೆರವು ನೀಡುತ್ತಿರುವ ರೀಗನ್ ಸರಕಾರ ಇದೀಗ ತನ್ನ ಕರಾಳ ಕೃತ್ಯಗಳನ್ನು ಇನ್ನೂ ತೀವ್ರಗೊಳಿಸಿದೆ. ನಿಕರಾಗುವ ಕ್ರಾಂತಿಯ ಏಳನೇ ವಾರ್ಷಿಕೋತ್ಸವದ ಸಮಯಕ್ಕೆ ಸರಿಯಾಗಿ ಅಧ್ಯಕ್ಷ ಡೇನಿಯಲ್ ಓರ್ಟೆಗಾ ಅವರನ್ನು ಕೊಲೆಗೈಯಲು ಸಿಐಎ ಸಂಚು ನಡೆಸಿತ್ತೆಂದೂ ಸಾಂಡಿನಿಸ್ಟಾ ಸರಕಾರದ ಸೈನ್ಯವು ಸಕಾಲದಲ್ಲಿ ಕ್ರಮಕೈಗೊಂಡು ಈ ಪಿತೂರಿಯನ್ನು ಬಹಿರಂಗಪಡಿಸಿ ವಿಫಲಗೊಳಿಸಿತೆಂದೂ ನಿಕರಾಗುವಾದ ಒಳಾಡಳಿತ ಸಚಿವಾಲಯ ತಮ್ಮ ಇತ್ತೀಚೆಗಿನ ಪ್ರಕಟಣೆಯೊಂದರಲ್ಲಿ ತಿಳಿಸಿದೆ.

ಕ್ರೀಡಾ ರಂಗ :

ಅಂತರರಾಷ್ಟ್ರೀಯ ಸೌಹಾರ್ದ ಕ್ರೀಡಾಕೂಟ

ಸೌಹಾರ್ದ ಕ್ರೀಡಾ ಕೂಟದಲ್ಲಿ ಸೋವಿಯತ್ ಕ್ರೀಡಾಳುಗಳ ವಿಜೃಂಭಣೆ

ಮಾಸ್ಕೊದಲ್ಲಿ ಜುಲೈ 4 ರಿಂದ ನಡೆಯುತ್ತಿದ್ದ ಹದಿನೇಳು ದಿನಗಳ ಪ್ರಥಮ ಸೌಹಾರ್ದ ಕ್ರೀಡಾಕೂಟದಲ್ಲಿ ಸೋವಿಯತ್, ಕ್ರೀಡಾಪಟುಗಳು ಎಲ್ಲ ವಿಭಾಗಗಳಲ್ಲೂ ತಮ್ಮ ಪ್ರಾಬಲ್ಯವನ್ನು ಮೆರೆದಿದ್ದಾರೆ ಒಂದುನೂರ ಹದಿನೆಂಟು ಸ್ವರ್ಣ, ಎಂಭತ್ತೆರಡು ರಜತ ಮತ್ತು ನಲುವತ್ತನಾಲ್ಕು ಕಂಚಿನ ಪದಕಗಳನ್ನೊಳಗೊಂಡು ಒಟ್ಟು 224 ಪದಕಗಳಿಂದ ಸೋವಿಯತ್ ತಂಡ ಕ್ರೀಡಾ ಜಗತ್ತಿನಲ್ಲಿ ತನ್ನ ಸಾರ್ವಭೌಮತೆಯನ್ನು ಮತ್ತೊಮ್ಮೆ ರುಜುವಾತುಪಡಿಸಿದೆ. ಎಂಭತ್ತು ರಾಷ್ಟ್ರಗಳ ಕ್ರೀಡಾಪಟುಗಳು ಭಾಗವಹಿಸಿದ್ದ ಈ ಉತ್ಸವದಲ್ಲಿ ನಲುವತ್ತೆರಡು ಸ್ವರ್ಣ ಪದಕಗಳನ್ನೊಳಗೊಂಡು ಒಟ್ಟು 140 ಪದಕಗಳಿಸಿದ ಅಮೇರಿಕಾ ಸಂಯುಕ್ತ ಸಂಸ್ಥಾನವು ದ್ವಿತೀಯ ಸ್ಥಾನವನ್ನು ಏಳು ಸ್ವರ್ಣ, ಹನ್ನೊಂದು ರಜತ ಮತ್ತು ಹತ್ತು ಕಂಚಿನ ಪದಕ ಗೆದ್ದ ಪೂರ್ವಜರ್ಮನಿ ತೃತೀಯ ಸ್ಥಾನವನ್ನು ಗಳಿಸಿವೆ.

ಸೋವಿಯತ್ ಒಕ್ಕೂಟದ ಸೆರ್ಗೆಯಿ ಬುಬ್ಕಾ, ಪೋಲ್‌ವಾಲ್ಟ್‌ನಲ್ಲಿ ತನ್ನ ಹಿಂದಿನ ವಿಶ್ವದಾಖಲೆಗಿಂತಲೂ ಒಂದು ಸೆಂಟಿಮೀಟರ್ ಎತ್ತರಕ್ಕೆ ಜಿಗಿದು ಹೊಸ ವಿಶ್ವದಾಖಲೆ ಸ್ಥಾಪಿಸಿರುವುದು ಈ ಕ್ರೀಡಾಕೂಟದ ವಿಶೇಷತೆಗಳಲ್ಲೊಂದು.

ವಿಶ್ವದ ಎಲ್ಲ ರಾಷ್ಟ್ರಗಳ ಜನತೆಯ ನಡುವೆ ಸ್ನೇಹ, ಸೌಹಾರ್ದ ಮತ್ತು ಸದ್ಭಾವಗಳು ಮೂಡುವಲ್ಲಿ ಕ್ರೀಡೆಗಳು ಮುಖ್ಯ ಪಾತ್ರವನ್ನು ವಹಿಸಬೇಕೆಂಬ ಉದ್ದೇಶದಿಂದ ಸೋವಿಯತ್ ಒಕ್ಕೂಟದ ಕ್ರೀಡಾ ಸಂಸ್ಥೆ ಮತ್ತು ಅಮೇರಿಕದ ವಾಣಿಜ್ಯೋದ್ಯಮಿ ಟೆಡ್ ಟರ್ನರ ಜಂಟಿಯಾಗಿ ಈ ಕ್ರೀಡಾಕೂಟವನ್ನು ಆಲೋಚಿಸಿದ್ದರು. ಆಟೋಟಗಳಲ್ಲಿ, ಕ್ರೀಡಾಚಟುವಟಿಕೆಗಳಲ್ಲಿ ನೈಪುಣ್ಯತೆ ಬರುವುದು ಕೇವಲ ಆಕಸ್ಮಿಕ ಅಲ್ಲ! ಕ್ರೀಡಾ ಚಟುವಟಿಕೆಗಳನ್ನು ಬದುಕಿನ ಅವಿಭಾಜ್ಯ ಅಂಗವಾಗಿ ಪರಿಗಣಿಸಿ, ಕ್ರೀಡಾಸವಲತ್ತುಗಳು ಮತ್ತು ವೈಜ್ಞಾನಿಕ ತರಬೇತಿ, ಇಷ್ಟಪಟ್ಟ ಎಲ್ಲರಿಗೂ ದೊರೆಯುವಂತೆ ಕ್ರಮಬದ್ಧವಾದ ಯೋಜನೆಗಳನ್ನು ಕೈಗೊಂಡಾಗ ಮಾತ್ರ ವಿಶ್ವದಾಖಲೆಗಳನ್ನು ಸೃಷ್ಟಿಸುವ ಕ್ರೀಡಾಪಟುಗಳ ನಿರ್ಮಾಣ ಸಾಧ್ಯವೆನ್ನುವುದನ್ನು ಈ ಸೌಹಾರ್ದ ಕೂಟದಲ್ಲಿ ಸೋವಿಯೆತ್ ಕ್ರೀಡಾಳುಗಳು ಮತ್ತೊಮ್ಮೆ ತೋರಿಸಿಕೊಟ್ಟಿದ್ದಾರೆ. ಈ ಕ್ರೀಡಾಕೂಟ ತನ್ನ ಉದ್ದೇಶಿತ ಆಶಯಗಳನ್ನು ಸಾಧಿಸಿಕೊಂಡಿರುವುದಕ್ಕೆ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಪ್ರಧಾನಕಾರ್ಯದರ್ಶಿ ಕಾ. ಮಿಖಾಯಿಲ್ ಗೋರ್ಬಚೇವ್ ಅವರ ಸಂಘಟಕರನ್ನೂ ಕ್ರೀಡಾಳುಗಳನ್ನೂ ಅಭಿನಂದಿಸಿದ್ದಾರೆ.

()

‘ರಾಷ್ಟ್ರೀಯ ಭಾವೈಕ್ಯತಾ ದಿನಾಚರಣೆ’

ಕಾರ್ಮಿಕ ಸಂಘಗಳ ನಿರ್ಧಾರ

ರಾಷ್ಟ್ರೀಯ ಚಳುವಳಿಯ ಸಮಯದಲ್ಲಿ ಜಾತಿಮತಗಳನ್ನು ಬದಿಗಿಟ್ಟು, ಎಲ್ಲಾ ವಿಭಾಗಗಳ ಕಾರ್ಮಿಕರನ್ನು ಒಂದುಗೂಡಿಸಿದ ಭವ್ಯಪರಂಪರೆಯುಳ್ಳ ನಮ್ಮ ದೇಶದ ಟ್ರೇಡ್‌ಯೂನಿಯನ್ ಚಳುವಳಿಯು, ಛಿದ್ರಕಾರಿ ಶಕ್ತಿಗಳ ವಿರುದ್ಧ ಪಂಣಾಮಕಾರಿಯಾಗಿ ಹೋರಾಡಿ ರಾಷ್ಟ್ರದ ಐಕ್ಯತೆಗಾಗಿ ಮತ್ತು ಸಾಮಾಜಿಕ ಪ್ರಗತಿಗಾಗಿದುಡಿಯಬೇಕೆಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಮೆ 11 ರಂದು ಏರ್ಪಡಿಸಿದ ರಾಷ್ಟ್ರೀಯ ಸಮಾವೇಶವು ನೀಡಿದ ಕರೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದ ಕಾರ್ಮಿಕ ಸಂಘಗಳು, ರಾಷ್ಟ್ರೀಯ ಭಾವೈಕ್ಯತಾದಿನವನ್ನು ಯಶಸ್ವಿಯಾಗಿ ಆಚರಿಸಲು ತೀರ್ಮಾನಿಸಿವೆ.

ಬೆಂಗಳೂರು

ಸಿಐಟಿಯು, ಎಐಟಿಯುಸಿ, ಬಿಎಂಎಸ್, ಐಎನ್‌ಟಿಯುಸಿ, ಜೀವವಿಮೆ, ಬ್ಯಾಂಕ, ಸರಕಾರಿ ನೌಕರದಾರರು, ಕೇಂದ್ರ ಸರಕಾರಿ ನೌಕರರ ಸಂಘಗಳ ಸಮನ್ವಯ ಸಮಿತಿಗಳ ಪ್ರತಿನಿಧಿಗಳು 23 ರಂದು ಸಭೆ ಸೇರಿ, ಬೆಂಗಳೂರಿನಲ್ಲಿ ಆಗಸ್ಟ 9 ರಂದು ಬೃಹತ್ ಸಮಾವೇಶದ ಮೂಲಕ ರಾಷ್ಟ್ರೀಯಭಾವೈಕ್ಯತಾ ದಿನ ಆಚರಿಸಬೇಕೆಂದು ನಿರ್ಣಯಿಸಿದ್ದಾರೆ. ಜಿಲ್ಲಾ ಮಟ್ಟದಲ್ಲಿಯೂ ಎಲ್ಲಾ ಕಾರ್ಮಿಕ ಸಂಘಗಳು ಸೇರಿ ದಿನಾಚರಣೆ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದ್ದಾರೆ.

ಮಂಗಳೂರು

ರಾಷ್ಟ್ರೀಯ ಸಮಗ್ರತೆಗಾಗಿ ಹಾಗೂ ಕೋಮುವಾದಿ ಮತ್ತು ಎಲ್ಲಾರೀತಿಯ ವಿಭಜನಕಾರಿ ಶಕ್ತಿಗಳ ವಿರುದ್ಧ ಆಗಸ್ಟ 9 ರಂದು "ರಾಷ್ಟ್ರೀಯ ಬಾವೈಕ್ಯತಾ ದಿನ"ವನ್ನು ಆಚರಿಸಲು ಅಖಿಲ ಭಾರತ ಮಟ್ಟದ ಕಾರ್ಮಿಕ ಸಂಘಗಳು ನೀಡಿದ ಕರೆಯನ್ನು ದ. ಕ. ಜಿಲ್ಲಾ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯು ಸ್ವಾಗತಿಸಿದ್ದು ಜಿಲ್ಲೆಯಲ್ಲಿ ಈ ಕಾರ್ಯಕ್ರಮವನ್ನು ಪೂರ್ಣವಾಗಿ ಯಶಸ್ವಿಗೊಳಿಸಲು ತೀರ್ಮಾನಿಸಿದೆ. ಆಗಸ್ಟ 9 ರಂದು ಮಂಗಳೂರಿನಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಸಲು ಕಾರ್ಮಿಕ ಸಂಘಗಳು ತೀರ್ಮಾನಿಸಿದೆ. ತಾ. 17-7-86 ರಂದು ಶ್ರೀ ಎಂ. ಲೋಕಯ್ಯಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿದ ಸಮನ್ವಯ [illegible]ಯ ಸಭೆಯಲ್ಲಿ ಈ [illegible]ನವನ್ನು ಕೈಕೊಳ್ಳಲಾ[illegible].

ಜಿಲ್ಲೆ[illegible] ಕಾರ್ಮಿಕ ವರ್ಗವು ಸಂಪೂರ್ಣ ಒಗ್ಗಟ್ಟಿನಿಂದ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದೂ ಮಹಾಜನ ಬಂಧುಗಳು ಸರ್ವ ರೀತಿಯಲ್ಲೂ ಸಹಕರಿಸಬೇಕೆಂದೂ ದ. ಕ. ಜಿಲ್ಲಾ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ವಿನಂತಿಸಿದೆ.

ಆಗಸ್ಟ್-1 ರೈತರ ಧರಣಿಗೆ ಭರದಿಂದ ಸಿದ್ಧತೆ

ರಾಯಚೂರು ಜಿಲ್ಲಾ ಕೇಂದ್ರಕ್ಕೆ ರೈತರ ಕಾಲು ಜಾತಾ.

ಕರ್ನಾಟಕ ಪ್ರಾಂತ ರೈತ ಸಂಘ, ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಜ್ಯದ ರೈತಾಪಿ ಜನತೆಯ ಹನ್ನೆರಡು ಪ್ರಮುಖ ಬೇಡಿಕೆಗಳನ್ನು ಒತ್ತಾಯಿಸಿ ಅಗಸ್ಟ ಒಂದರಂದು ಜಿಲ್ಲಾ ಕೇಂದ್ರದಲ್ಲಿ ಬೃಹತ್ ಪ್ರದರ್ಶನಕ್ಕೆ ರೈತಾಪಿ ಜನತೆ ಕಾಲು ಜಾತಾದಲ್ಲಿ ಹೋಗಲು ರಾಯಚೂರು ಜಿಲ್ಲಾ ಸಮಿತಿ ತೀರ್ಮಾನಿಸಿದೆ.

ರಾಜ್ಯದ ಬೇಡಿಕೆಗಳನ್ನೊಳಗೊಂಡಂತೆ ಜಿಲ್ಲೆಯ ಪ್ರಮುಖ ಬೇಡಿಕೆಗಳನ್ನು ಸರಕಾರಕ್ಕೆ ಒತ್ತಾಯಿಸಿ ಜಿಲ್ಲೆಯ ಎಲ್ಲಾ ತಾಲ್ಲೋಕುಗಳಿಂದ ರೈತರ ಕಾಲು ಜಾತಾ ನಡೆಸಲು ಕರೆ

ಜಿಲ್ಲೆಯನ್ನು ಸಮಸ್ಯೆಗಳ ಆಧಾರದಲ್ಲಿ ಮೂರು ವಿಂಗಡನೆ ಮಾಡಿ, ಮೂರು ಜಾತಾಗಳನ್ನು ಪ್ರತ್ಯೇಕವಾಗಿ ಜಿಲ್ಲಾ ಕೇಂದ್ರಕ್ಕೆ ತರಲು ತೀರ್ಮಾನಿಸಲಾಗಿದೆ

21-7-86 ರಿಂದ ಯಲುಬುರ್ಗಾ ತಾಲ್ಲೋಕಾ ಕೇಂದ್ರದಿಂದ ಕಾ॥ ಉಗ್ರಪ್ಪ ಅಧ್ಯಕ್ಷರು ರಾಜ್ಯ ಸಮಿತಿ ಇವರಿಂದ ಉದ್ಘಾಟಿಸಲ್ಪಟ್ಟು. ಕುಷ್ಟಗಿ, ಲಿಂಗಸುಗೂರು, ಮಾನ್ವಿ ತಾಲ್ಲೋಕಾಗಳನ್ನು ಹಾಯ್ದು ನೂರಾರು ರೈತರು ರಾಯಚೂರು ನಗರಕ್ಕೆ ಅಗಸ್ಟ ಒಂದರಂದು ತಲುಪುತ್ತಾರೆ. ಜಾತಾದ ಮುಖ್ಯ ಘೋಷಣೆ ಬರಗಾಲಕ್ಕೆ ಶಾಶ್ವತ ಪರಿಹಾರವಾಗಿ ಸಾಮೂಹಿಕ ನೀರಾವರಿ ಯೋಜನೆ,

24-7-86 ರಿಂದ ಗಂಗಾವತಿಯಿಂದ ಕಾ॥ ಪಿ. ಜಗನ್ನಾಥ್ ಕೃಷಿ ಕೂಲಿಕಾರ ಸಂಘಟನೆ ಮುಖಂಡರಿಂದ ಉದ್ಘಾಟಿಸಲ್ಪಟ್ಟು ಸಿಂಧನೂರ, ಮಾನ್ವಿ, ತಾಲ್ಲೋಕಾಗಳನ್ನು ಹಾಯ್ದು ರಾಯಚೂರ ನಗರಕ್ಕೆ ಅಗಸ್ಟ ಒಂದರಂದು ತಲುಪುತ್ತದೆ. ತುಂಗಭದ್ರಾ ಕಾಲುವೆ ಯಿಂದ ಸಮರ್ಪಕ ನೀರಿನ ವಿತರಣೆ, ಡ್ಯಾಮಿನಲ್ಲಿ ಹೆಚ್ಚುತ್ತಿರುವ ಹೂಳನ್ನೂ ತೆಗೆಯುವದು ಪ್ರಮುಖ ಘೋಷಣೆಯಾಗಿದೆ.

27-7-87 ರಂದು ಜಾಲಹಳ್ಳಿಯಿಂದ ಕಾ। ಆರ್ ವೆಂಕಟರಾಮಯ್ಯ ಶಾಸಕರು ಸಿ. ಪಿ. ಐ. (ಎಂ) ಅವರಿಂದ ಉದ್ಘಾಟಿಸಲ್ಪಟ್ಟು ದೇವದುರ್ಗ ತಾಲ್ಲೋಕಾವನ್ನು ಹಾಯ್ದು ರಾಯಚೂರು ನಗರಕ್ಕೆ ಶಾಶ್ವತ ಪರಿಹಾರವಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಬಲದಂಡೆ ಕಾಲುವೆ ಕೂಡಲೇ ಕೈಗೆತ್ತಿಕೊಳ್ಳಬೇಕೆಂಬುದು ಪ್ರಮುಖ ಘೋಷಣೆಯಾಗಿದೆ.

ಮೂರು ಜಾತಾಗಳು ಸೇರಿದಂತೆ ಜಿಲ್ಲೆಯ ಪ್ರಮುಖ ಬೇಡಿಕೆಗಳನ್ನು ಒತ್ತಾಯಿಸಿ ರಾಯಚೂರು ನಗರದಲ್ಲಿ ಬೃಹತ್ ಪ್ರದರ್ಶನವನ್ನು ನಡೆಸಿ ಜಿಲ್ಲಾಧಿಕಾರಿಯವರಿಗೆ ಮನವಿಯನ್ನು ಸಲ್ಲಿಸಲು ತೀರ್ಮಾನಿಸಲಾಗಿದೆ ಸಾಯಂಕಾಲ 5-00 ಘಂಟೆಗೆ ಬಹಿರಂಗ ಸಭೆಯನ್ನು ಕಾಂ ಸೂರ್ಯನಾರಾಯಣಾ ರಾವ್ ಅಧ್ಯಕ್ಷರು ಸಿ. ಐ. ಟಿ. ಯು ಇವರು ಉದ್ದೇಶಿಸಿ ಮಾತನಾಡಲಿದ್ದಾರೆ.

ಜಾತಾ ತಯಾರಿ ಉತ್ಸಾಹದಿಂದ ನಡೆದಿದ್ದು 30000, ಕರಪತ್ರಗಳನ್ನು ಹಾಕಿ, ನೂರಾರು ಹಳ್ಳಿಗೆ ಕಾರ್ಯಕರ್ತರು ಹೋಗಿ ಪ್ರಚಾರ ಮಾಡಿ ರೈತರನ್ನು ಭಾಗವಹಿಸುವಂತೆ ಮಾಡಿದ್ದಾರೆ ಅಗಸ್ಟ ಒಂದರೊಳಗೆ ಅತೀ ಹೆಚ್ಚು ಹಳ್ಳಿಗಳಿಗೆ ಸಂಪರ್ಕಿಸಲು ತೀರ್ಮಾನಿಸಲಾಗಿದೆ.

ಗುಲ್ಬರ್ಗ ರೈತರ ಜಾಥಾ ಮತಪ್ರದರ್ಶನ

ರೈತರ ತುರ್ತು ಬೇಡಿಕೆಗಳಾದಜಿಲ್ಲೆಯಾದ್ಯಂತ ಮೇವಿನ ಕೊರತೆ ಎದುರಿಸುತ್ತಿರುವುದರಿಂದ ಮೇವು ಒದಗಿಸಲು, ಎನ್‌ಆರ್‌ಇಪಿ ಆರ್‌ಎಲ್‌ಇಜಿಪಿಯಲ್ಲಿ ಬಡ ರೈತ ಕೃಷಿ ಕೂಲಿಕಾರರಿಗೆ ವರ್ಷವಿಡೀ ಕೆಲಸ ಕೊಡಲು ರೈತರ ಬೆಳೆಗೆ ಯೋಗ್ಯ ಬೆಲೆ ನಿಗದಿಪಡಿಸಿ ಕಾರ್ಪೋರೇಶನ್ ಫೇಡರೇಶನ ಮೂಲಕ ಖರೀದಿಸಲು, ಸರ್ಕಾರಿ ಬಂಜರು ಭೂಮಿ ಉಳುಮೆ ಮಾಡಿದ ಬಡ ರೈತ ಕೃಷಿ ಕೂಲಿಕಾರರಿಗೆಪಟ್ಟಾ ಮಾಡಿಕೊಡಲು ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿ ಕಾನೂನು ಜಾರಿಗೊಳಿಸಲು, ಅಮರ್ಜಾ ನೀರಾವರಿ ಯೋಜನೆ, ದಂಡೋರಿ ನಾಲಾ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣಕಾಸು ಒದಗಿಸಿ ಬೇಗನೆ ಪೂರ್ತಿ ಮಾಡಲು, ಬಡ ರೈತ ಕೃಷಿ ಕಾರ್ಮಿಕರಿಗೆ ಹಸಿರು ಕಾರ್ಡು ಒದಗಿಸಿ ಒಳ್ಳೆಯ ಅಕ್ಕಿ ತಲಾ ಹತ್ತು ಕೆಜಿ ಕೊಡಲು ಕೃಷ್ಣಾ ಗ್ರಾಮೀಣ ಬ್ಯಾಂಕಿಗೆ ನಬಾರ್ಡದಿಂದ ರೀಫೈನಾನ್ಸ ಮಾಡಲು ಒತ್ತಾಯಿಸಿ ಮತ್ತು ಸ್ಥಳೀಯ ಬೇಡಿಕೆಗಳಾದ ಕುಡಿಯುವ ನೀರು, ರಸ್ತೆ ಶಾಲಾ ಕಟ್ಟಡ ಜನತಾ ಮನೆ, ತಾಂಡಾಗಳಿಗೆ ವಿದ್ಯುತಪೂರೈಕೆ ಮಾಡಲು ಒತ್ತಾಯಿಸಿ ಆಗಸ್ಟ 1 ರಂದು ರೈತರ ಬೃಹತ್ ಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿಎದುರು ಧರಣಿ ಸತ್ಯಾಗ್ರಹ ಮಾಡಲು ನಿರ್ಧರಿಸಿದೆ.

ಆಳಂದ ತಾಲೂಕಿನ ಆದ್ಯಂತ 25-7-86 ರಿಂದ 31-7-86 ರವರೆಗೆ ಒಂದು ಹಳ್ಳಿಯಿಂದ ಹಳ್ಳಿಗೆ ಜಾಥಾ ನಡೆಸಲಾಗುವುದು ಎಂದು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಾಬು ಮುಗಳಿಯವರು ತಿಳಿಸಿದ್ದಾರೆ.

ರಾಮನಗರ ಗಲಭೆಯ ಖಂಡನೆ

(ಒಂದನೆ ಪುಟದಿಂದ)

ಲಾಭ ಪಡೆಯಲು ಅಂಥ ಶಕ್ತಿಗಳನ್ನು ಅವಲಂಬಿಸಿರುವುದು, ಅವುಗಳಿಗೆ ಪ್ರೋತ್ಸಾಹ ನೀಡುತ್ತಿರುವುದುಮುಖ್ಯ ಕಾರಣಗಳಲ್ಲೊಂದು.

ಕಾಂಗ್ರೆಯ ಕಾರ್ಮಿಕ ಅಂಗವಾದ ಐ ಎನ್ ಟಿ ಯುಸಿಯನ್ನೊಳಗೊಂಡು ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಗಳು ಆಗಸ್ಟ 9 ರಂದು ದೇಶಾದ್ಯಂತ ರಾಷ್ಟ್ರೀಯ ಸೌಹಾರ್ದತಾ ದಿನ ಆಚರಿಸುವ ತಯಾರಿ ನಡೆಸುತ್ತಿರುವಾಗ ದೇಶದ ನಾನಾಭಾಗಗಳಲ್ಲಿಯಂತೆರಾಮನಗರದಲ್ಲಿಯೂ ಎರಡು ಜಾತಿಯಜನತೆ ಯಾವದೋ ಕಾರಣಕ್ಕಾಗಿ ಈ ರೀತಿ ಹಿಂಸಾಚಾರಕ್ಕಿಳಿದಿರುವುದು ಎಲ್ಲಾ ರಾಜಕೀಯ ಪಕ್ಷಗಳ ಮೇಲೆ ಅದರಲ್ಲೂ ಎಡ ಪಕ್ಷಗಳ ಹಾಗೆಯೇ ಸಂಘಟಿತ ಕಾರ್ಮಿಕ ವರ್ಗದ ಮೇಲೆ ಗುರುತರವಾದ ಜವಾಬ್ದಾರಿ ಹೊರಿಸಿದಂತಾದೆ.

ರಾಮನಗರಂನಲ್ಲಿ ನಡೆದ ಕೋಮು ಗಲಭೆ ಹಿಂಸಾಚಾರವನ್ನು ಪೋಲಿಸರ ಗೋಳಿಬಾರನ್ನು ಮಾರ್ಕ್ಸವಾದಿ ಕಮ್ಯುನಿಸ್ಟ ಪಕ್ಷ ಬಲವಾಗಿ ಖಂಡಿಸುತ್ತದೆ. ಮೃತರ ಕುಟುಂಬದವರಿಗೂ ಗಾಯಗೊಂಡವರಿಗೂ ಸರಿಯಾದ ಪರಿಹಾರ ಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತದೆ.

ಅದೇ ಸಮಯದಲ್ಲಿಅಂಥ ಮತೀಯ ಗಲಭೆಗಳು ತಲೆಎತ್ತದಂತೆ ಪರಿಣಾಮಕರವಾದ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವನ್ನೂ ಒತ್ತಿಹೇಳಲಿಚ್ಚಿಸುತ್ತದೆ. ಮತೀಯ ಶಕ್ತಿಗಳಿಂದ ಕ್ಷುಲ್ಲಕ ಕಾರಣಗಳಿಗಾಗಿ ಪ್ರಚೋದಿತರಾಗಿ ಜಾತೀಯ ಗಲಭೆ ಮಾಡಬಾರದೆಂದೂ, ಕೋಮು ಸೌಹಾರ್ದತೆ ಹಾಗೂ ಶಾಂತಿ ಕಾಪಾಡಿಕೊಳ್ಳಬೇಕೆಂದು ರಾಮನಗರ ನಿವಾಸಿಗಳಿಗೆ ಸಿಪಿಐ(ಎಂ) ವಿನಂತಿ ಮಾಡಿಕೊಳ್ಳುತ್ತದೆ.

ಗುಂಡೂರಾವ್ ಉಚ್ಛಾಟನೆ

ಒಂದನೇ ಪುಟದಿಂದ

ಪ್ರಜಾಪ್ರಭುತ್ವ ಶಕ್ತಿಗಳ ಪರ್ಯಾಯ ರಂಗ, ನಿರ್ಮಿಸುವುದರ ಅಗತ್ಯವನ್ನು ಸಿ. ಪಿ. ಐ. (ಎಂ) ಪ್ರತಿಪಾದಿಸುತ್ತಾ ಬಂದಿದೆ. ಆ ಗುರಿಗು ಸಾಧನೆಗೆ ಕಾಂಗ್ರೆ ಪಕ್ಷದಲ್ಲುಂಟಾಗುವ ಬಿರುಕು ಸಹಾಯ ಮಾಡಬಲ್ಲದು. ಕಾಂಗ್ರೆ ದುರ್ಬಲವಾದಷ್ಟು ಹಿತ. ಅದೇ ಸಮಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬೆಳೆದು ಬರುವುದು ಅಷ್ಟೇ ಅಗತ್ಯ. ಆ ಕಾರಣದಿಂದ ಗುಂಡೂರಾವ್ ಅವರ ಉಚ್ಛಾಟನೆ ಕರ್ನಾಟಕ ಕಾಂಗ್ರೆ ಶಕ್ತಿಯನ್ನು ಕುಂಠಿತಗೊಳಿಸುವುದಾದರೆ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗೆ ಸಹಾಯವಾಗುವುದಾದರೆ ನಾವದನ್ನು ಸ್ವಾಗತಿಸುತ್ತೇವೆ.

ಬೆಂಗಾಲ್ ಲ್ಯಾಂಪ್ಸ್ ಕಾರ್ಮಿಕರಿಂದ ಬರ ಪರಿಹಾರ

ಬೆಂಗಳೂರಿನ ಬೆಂಗಾಲ ಲ್ಯಾಂಪ್ಸ್ ಕಾರ್ಮಿಕರು ರೈತರ ನೆರವಿಗೆ ಧಾವಿಸಿರುವುದು ಸ್ವಾಗತಾರ್ಹ. ಆ ಕಾರ್ಮಿಕರು ಸಂಗ್ರಹಿಸಿದ ಹಣದಿಂದ ಹೊಸಕೋಟೆ ತಾಲ್ಲೂಕಿನ ನಂದುಗುಡಿ, ಗ್ರಾಮದ 1000 ಮಿ ಬಡರೈತ-ಕೃಷಿ ಕಾರ್ಮಿಕರಿಗೆ ರೈತ ಸಂಘ ಬಿತ್ತನೆರಾಗಿ ಹಂಚಿದೆ.

ತಾ । ರಂದು ರೈತ ಮುಖಂಡ ಆರ್. ಆರ್ ಹರೀಂದ್ರರವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿ. ಐ. ಟಿ. ಯು ಅಧ್ಯಕ್ಷರಾದ ಸೂರ್ಯನಾರಾಯಣರಾವ್, ಎಚ್. ಶಿ. ಪ್ರಭುದೇವಯ್ಯ, ಆರ್. ಆರ್. ಮನೋಹರ ಮೊದಲಾದವರು ಭಾಷಣ ಮಾಡಿ, ರೈತರ ಸಹಾಯಕ್ಕೆ ಬಂದ ಕಾರ್ಮಿಕರನ್ನು ಅಭಿನಂದಿಸಿ, ರೈತರು ಸಂಘಟಿತರಾಗಿ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಹೋರಾಡಲು ಮುಂದಾಗ ಬೇಕೆಂದು ಕರೆ ನೀಡಿದರು. ಸುಮಾರು 40 ಗ್ರಾಮಗಳಲ್ಲಿ ಕೂಡಿದ ಜನರಿಂದಲೇ ಬಡವರನ್ನು ಆರಿಸಿ ಯಾದಿ ಮಾಡಲಾಗಿತ್ತು. ಸರಕಾರಕ್ಕಿಂತಲೂ ರೈತ ಸಂಘ ಒಳ್ಳೆ ಕೆಲಸ ಮಾಡಿತೆಂದು ರೈತರು ಹೇಳುತ್ತಿದ್ದುದು ಕೇಳಿ ಬರುತ್ತಿತ್ತು.

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N K. Upadhyaya